ಲಿಖಿತ ಮೂಲಕ
ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೯೪

# ಪಟ್ಟಿ – ೦೨

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : ೨೨ನೇ ನವೆಂಬರ್, ೨೦೧೬

---

## ಸಮೂಹ – II

೧. ಇಂಧನ ಸಚಿವರು.

೨. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

೩. ಸಹಕಾರ ಮತ್ತು ಸಕ್ಕರೆ ಸಚಿವರು.

೪. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು.

೫. ಕೃಷಿ ಸಚಿವರು.

೬. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು.

೭. ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು.

---

# ಕಲಬುರಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣದ ಕಾಮಗಾರಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೬(೧೪೪) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣದ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆಯೇ; ಇದ್ದಲ್ಲಿ, ದಾಖಲೆಗಳೊಂದಿಗೆ ಸ್ಪಷ್ಟ ಮಾಹಿತಿ ನೀಡುವುದು ;

(ಆ) ಸದರಿ ವಿಮಾನ ನಿಲ್ದಾಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ನೀಡಲಾಗಿದೆ ; (ಕಾಮಗಾರಿಗಳ ಮಾಹಿತಿ, ಅಂದಾಜು ವೆಚ್ಚದ ಮಾಹಿತಿ ಹಾಗೂ ಪ್ರಾರಂಭಿಸಲಾದ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ವಿಮಾನ ನಿಲ್ದಾಣದಲ್ಲಿ ಇಲ್ಲಿಯವರೆಗೆ ಆದ ಕಾಮಗಾರಿಗಳು ಯಾವುವು; ಹಾಗೂ ಇದಕ್ಕೆ ತಗುಲಿದ ವೆಚ್ಚ ಎಷ್ಟು ; (ಪ್ರತ್ಯೇಕ ಮಾಹಿತಿ ನೀಡುವುದು)

(ಈ) ಸದರಿ ವಿಮಾನ ನಿಲ್ದಾಣದ ಭೂಮಿ ಎಷ್ಟು ಹಾಗೂ ಸದರಿ ಭೂಮಿಯನ್ನು ಇಲಾಖೆಗೆ ಹಸ್ತಾಂತರಿಸಲಾಗಿದೆಯೇ ; ಹಸ್ತಾಂತರ ಆಗದೇ ಇದ್ದಲ್ಲಿ, ಕಾರಣಗಳೇನು; (ಮಾಹಿತಿ ನೀಡುವುದು)

(ಉ) ಈ ವಿಮಾನ ನಿಲ್ದಾಣದ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲಾಗುವುದು?(ಪ್ರತ್ಯೇಕ ಮಾಹಿತಿ ನೀಡುವುದು)

## ಕಲಬುರಗಿ ತಾಲ್ಲೂಕಿನ ಫರತಾಬಾದಲದಲ್ಲಿ ಉದ್ದೇಶಿತ "ಶಾಖೋತ್ಪನ್ನ ವಿದ್ಯುತ್ ಸ್ಥಾವರ" ಕ್ಕೆ ಮಂಜೂರಾತಿಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೭ (೧೪೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ತಾಲ್ಲೂಕಿನ ಫರತಾಬಾದ ಹೋಬಳಿಯಲ್ಲಿ ಉದ್ದೇಶಿತ "ಶಾಖೋತ್ಪನ್ನ ವಿದ್ಯುತ್ ಸ್ಥಾವರ"ಕ್ಕೆ (೧೩೨೦ ಮೆ.ವ್ಯಾ) ಕೇಂದ್ರ ಸರ್ಕಾರದ ಮಂಜೂರಾತಿ ದೊರಕಿದೆಯೇ; (ದಾಖಲೆಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಉದ್ದೇಶಿತ "ಶಾಖೋತ್ಪನ್ನ ವಿದ್ಯುತ್ ಸ್ಥಾವರ" ಕ್ಕೆ ಕೇಂದ್ರದಿಂದ ಕಲ್ಲಿದ್ದಲು ಹಂಚಿಕೆಯಾಗಿದೆಯೇ; ಆಗಿದ್ದರೆ, ಎಲ್ಲಿಂದ ಹಾಗೂ ಎಷ್ಟು ಪ್ರಮಾಣದಲ್ಲಿ ಆಗಿದೆ; (ವಿವರ ನೀಡುವುದು)

(ಇ) ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಗಳಿಂದ ಅನುಮೋದನೆ ಪಡೆಯುವ ಅವಶ್ಯಕತೆ ಇರುತ್ತದೆ; ಹಾಗೂ ಯಾವ ಯಾವ ಇಲಾಖೆಗಳಿಂದ ಅನುಮೋದನೆ ಪಡೆಯಲಾಗಿದೆ; (ಪ್ರತ್ಯೇಕ ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಯೋಜನೆಯು ಯಾವ ಕಾಲಮಿತಿಯಲ್ಲಿ ಶಂಕುಸ್ಥಾಪನೆ, ಕಾಮಗಾರಿ ಕಾರ್ಯ, ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? (ಸ್ಪಷ್ಟ ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೇಂದ್ರದ "ಅಮೃತ" ಯೋಜನೆಯಲ್ಲಿ ಆಯ್ಕೆಯಾದ ನಗರಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೮ (೧೪೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೇಂದ್ರದ "ಅಮೃತ" ಯೋಜನೆಯಡಿಯಲ್ಲಿ ಆಯ್ಕೆಯಾದ ನಗರಗಳು ಯಾವುವು; (ನಗರವಾರು, ಕೇಂದ್ರದ ಹಾಗೂ ರಾಜ್ಯದ ಅನುದಾನವಾರು ಮಾಹಿತಿ ನೀಡುವುದು)

(ಆ) ಸದರಿ ನಗರಗಳ ವಾಸ್ತವಿಕ ಕ್ರಿಯಾ ಯೋಜನೆಗಳನ್ನು ತಯಾರಿಸಲಾಗಿದೆಯೇ; (ನಗರವಾರು, ಕ್ರಿಯಾಯೋಜನೆವಾರು, ವೆಚ್ಚವಾರು ಹಾಗೂ ಕಾಲಮಿತಿವಾರು ವಿವರ ನೀಡುವುದು)

(ಇ) ಹೊಸ ಜಿಲ್ಲೆಗಳಾಗಿ ಘೋಷಣೆಗೊಂಡ ಜಿಲ್ಲಾ ಕೇಂದ್ರಗಳಾದ ಯಾದಗಿರಿ, ಕೊಪ್ಪಳ ನಗರಗಳನ್ನು "ಅಮೃತ" ಯೋಜನೆಯಲ್ಲಿ ಆಯ್ಕೆಯಾಗುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ತಿದ್ದುಪಡಿ ತಂದು "ಜಿಲ್ಲಾ ಕೇಂದ್ರ ಸ್ಥಾನ" ಗಳೆಂದು ಪರಿಗಣಿಸಲು ಸರ್ಕಾರ ಮುಂದಾಗುವುದೇ? (ಸಂಪೂರ್ಣ ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಅನಾವೃಷ್ಠಿ ಹಾಗೂ ಅತಿವೃಷ್ಠಿಯಿಂದ ರೈತರಿಗೆ ಬೆಳೆ ವಿಮೆ ಪಾವತಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೮೯ (೧೪೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಅನಾವೃಷ್ಠಿ ಹಾಗೂ ಅತಿವೃಷ್ಠಿಯಿಂದ ಈ ಭಾಗದ ರೈತರು ಬೆಳೆದ ಬೆಳೆ ಕಳೆದುಕೊಂಡು ತತ್ತರಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಳೆದ ೩ ವರ್ಷದ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಪ್ರದೇಶದ ರೈತರಿಗೆ ಆದಂತಹ ಹಾನಿ ತುಂಬುವ ನಿಟ್ಟಿನಲ್ಲಿ ಬೆಳೆ ವಿಮೆ ಪಾವತಿಯಲ್ಲಿ ತಾರತಮ್ಯ ಹಾಗೂ ಹಲವು ಪ್ರಕರಣಗಳಲ್ಲಿ ಬೆಳೆ ವಿಮೆ ಸಿಗದೆ ಕಂಗಾಲಾಗಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ; (ಜಿಲ್ಲಾವಾರು, ಹಾನಿಗೊಳಗಾದ ರೈತರ ಸಂಖ್ಯೆವಾರು ಕಳೆದ ೩ ವರ್ಷದ ವಿವರ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ರೈತರಿಗೆ ಆಗಿರುವ ಬೆಳೆ ಹಾನಿಗೆ ಬೆಳೆ ವಿಮೆ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಇದ್ದರೆ, ಸರ್ಕಾರದ ಮುಂದಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಬೀದರ್, ಕಲಬುರಗಿ ಮತ್ತು ಯಾದಗಿರಿ (KMF) ಹಾಲು ಒಕ್ಕೂಟದಲ್ಲಿ ರೈತರಿಗೆ ಪ್ರೋತ್ಸಾಹ ಧನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೯೦ (೧೪೭೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್, ಕಲಬುರಗಿ ಮತ್ತು ಯಾದಗಿರಿ ಹಾಲು ಒಕ್ಕೂಟ (KMF)ಕ್ಕೆ ಸರಬರಾಜಾಗುತ್ತಿರುವ ಹಾಲು ಎಷ್ಟು; (ಸಂಘಗಳ ಹಾಗೂ ರೈತರ ಪ್ರತ್ಯೇಕ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಒಕ್ಕೂಟದ ಅಡಿಯಲ್ಲಿ ಸರಬರಾಜು ಆದ ಹಾಲಿಗೆ ನೀಡುತ್ತಿರುವ ಪ್ರೋತ್ಸಾಹ (ಸಹಾಯ) ಧನವೆಷ್ಟು; ಪ್ರತಿ ಲೀಟರ್‌ಗೆ ನೀಡಲಾಗುತ್ತಿರುವ ಪ್ರೋತ್ಸಾಹ ಧನ ಮತ್ತು ಎಷ್ಟು ರೈತರಿಗೆ ಪ್ರೋತ್ಸಾಹ (ಸಹಾಯ) ಧನ ನೀಡಲಾಗಿದೆ; (ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಒಕ್ಕೂಟದ ಅಡಿಯಲ್ಲಿ ರೈತರಿಗೆ ನೀಡುವ ಪ್ರೋತ್ಸಾಹ (ಸಹಾಯ) ಧನದಲ್ಲಿ ಭಾರಿ ಅಕ್ರಮ ಬೆಳಕಿಗೆ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದರೆ, ಹಗರಣಗಳಲ್ಲಿ ಹಾಗೂ ಹಾಲಿನಪುಡಿ ಹಗರಣದಲ್ಲಿ ಭಾಗಿಯಾದ ವ್ಯಕ್ತಿಗಳು ಹಾಗೂ ಹಗರಣದ ಮೊತ್ತದ ಸವಿವರ ಮಾಹಿತಿ ನೀಡುವುದು;

(ಈ) ಸದರಿ ಒಕ್ಕೂಟದ ಅಡಿಯಲ್ಲಿ ನಡೆದ ರೈತರ ಪ್ರೋತ್ಸಾಹ ಧನದಲ್ಲಿ ಹಾಗೂ ಹಾಲಿನಪುಡಿ ಹಗರಣದಲ್ಲಿ ಆದಂತಹ ಅಕ್ರಮಗಳಲ್ಲಿ ಭಾಗಿಂಯಾದ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

## ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ಪಟ್ಟಣ ಪಂಚಾಯ್ತಿ ಮತ್ತು ನಗರ ಸಭೆ, ಪುರಸಭೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೯೧ (೧೫೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯ್ತಿಗಳು ಯಾವುವು;

(ಆ) ಕಳೆದ ೦೨ ವರ್ಷಗಳಲ್ಲಿ ಸಾಮಾನ್ಯ ಸಭೆ ಹಾಗೂ ವಿಶೇಷ ಸಭೆ ನಡೆಸಿರುವುದರ ವಿವರ ನೀಡುವುದು;

(ಇ) ಈ ಸಭೆ ನಡೆಸುವ ಕುರಿತು ಇರುವ ನಿಯಮಾವಳಿಗಳೇನು; ಯಾವ ಸ್ಥಳಿಯ ಸಂಸ್ಥೆಗಳಲ್ಲಿ ನಿಯಮಿತವಾಗಿ ಸಭೆ ನಡೆಸದಿರುವ ಬಗ್ಗೆ ದೂರುಗಳು ಬಂದಿವೆ; (ವಿವರ ನೀಡುವುದು)

(ಈ) ಈ ಸಭೆಗಳನ್ನು ನಿಯಮಿತದಂತೆ ನಡೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿನ ರೈತರ ಸಾಲದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೨ (೨೦೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ದೂರು ತಾಲ್ಲೂಕು, ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ದಿನಾಂಕ: ೩೧.೦೩.೨೦೧೬ ರಿಂದ ೧೫.೦೭.೨೦೧೬ರವರೆಗೆ ಎಷ್ಟು ಜನ ರೈತರು ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದಾರೆ; (ರೈತರ ಸಂಪೂರ್ಣ ವಿವರ ನೀಡುವುದು)

(ಆ) ಮೇಲ್ಕಂಡ ಅವಧಿಯಲ್ಲಿ ರೈತರು ಸಕಾಲಕ್ಕೆ ಸಂಪೂರ್ಣ ಸಾಲ ಪಾವತಿ ಮಾಡಿದ್ದರೂ, ಅವರಿಂದ ಸುಸ್ತಿ ಬಡ್ಡಿಯನ್ನು ವಸೂಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; ಎಷ್ಟು ರೈತರಿಂದ ಈ ರೀತಿ ಸುಸ್ತಿ ಬಡ್ಡಿಯನ್ನು ವಸೂಲು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಇ) ಸಂಘದಲ್ಲಿ ಪೂರ್ಣಾವಧಿ ಕಾರ್ಯದರ್ಶಿ ಇಲ್ಲದೆ ಇರುವ ಕಾರಣ, ರೈತರಿಗೆ ಸಕಾಲಕ್ಕೆ ನೋಟೀಸ್ ನೀಡುವುದರಲ್ಲಿ ವಿಳಂಬವಾಗಿರುವುದೇ ರೈತರು ಸುಸ್ತಿದಾರರಾಗಲು ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರೈತರು ಪಾವತಿಸಿರುವ ಸುಸ್ತಿ ಬಡ್ಡಿಯನ್ನು ಹಿಂದುರುಗಿಸಲು ಕೈಗೊಂಡಿರುವ ಕ್ರಮಗಳೇನು;

(ಈ) ಪಿಗ್ಮಿದಾರರಿಂದ ಸಂಗ್ರಹ ಮಾಡಿರುವ ಹಣವನ್ನು ಸಂಘವು ದುರುಪಯೋಗಪಡಿಸಿಕೊಂಡಿದ್ದು, ಈ ಹಣವನ್ನು ಪಿಗ್ಮಿದಾರರಿಗೆ ನೀಡಲು ಕೈಗೊಂಡಿರುವ ಕ್ರಮಗಳೇನು; ಯಾವ ರೀತಿ ಹಣವನ್ನು ಮರು ಸಂದಾಯ ಮಾಡಲಾಗುವುದು? (ವಿವರ ನೀಡುವುದು)

## ಸೋಲಾರ್ ಯೋಜನೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೩ (೨೦೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಸೋಲಾರ್ ಪವರ್ ಪ್ರಾಜೆಕ್ಟ್ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಸೋಲಾರ್ ಪವರ್ ಯೋಜನೆಯನ್ನು ಯಾವ ಯಾವ ಸ್ಥಳದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಇ) ಈ ಯೋಜನೆಯಿಂದ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ವಿದ್ಯುತ್ ತಯಾರಿಸಬಹುದಾಗಿದೆ? (ವಿವರ ನೀಡುವುದು)

## ಮಂಡ್ಯ ಜಿಲ್ಲೆಯ ಗ್ರಾಮೀಣ ಕ್ಷೇತ್ರದ ರಸ್ತೆಗಳು

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೪ (೨೦೮) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಗ್ರಾಮೀಣ ಭಾಗದ ಲೋಕೋಪಯೋಗಿ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕರಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವ ಯಾವ ರಸ್ತೆಗಳು ಹಾಳಾಗಿರುತ್ತವೆ; ರಸ್ತೆ ಸುಧಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ರಸ್ತೆ ಹೆಸರು ಮತ್ತು ವಿಸ್ತೀರ್ಣ ಸಹಿತ ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಮಂಡ್ಯ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ವಿವಿಧ ಯೋಜನೆಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳೆಷ್ಟು? (ವರ್ಷವಾರು ಮಂಜೂರಾದ ಅನುದಾನ ಹಾಗೂ ಬಿಡುಗಡೆಯಾದ ಅನುದಾನ, ಕಾಮಗಾರಿ ಸಹಿತ ವಿವರ ನೀಡುವುದು)

## ರಾಜ್ಯದಲ್ಲಿ ಪಶುಭಾಗ್ಯ ಯೋಜನೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೫ (೨೦೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪಶುಭಾಗ್ಯ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಯಿತು; ಈ ಯೋಜನೆಯ ರೂಪುರೇಷೆಗಳೇನು;

(ಆ) ಈ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆವಿಗೂ ಬಿಡುಗಡೆಗೊಳಿಸಿ ಖರ್ಚು ಮಾಡಿದ ಅನುದಾನವೆಷ್ಟು;

(ಇ) ಮಂಡ್ಯ ಜಿಲ್ಲೆಯಲ್ಲಿ ಈ ಯೋಜನೆಯ ಲಾಭಪಡೆದ ಫಲಾನುಭವಿಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಮಂಡ್ಯ ಜಿಲ್ಲೆಯ ರೈತರ ಅಭಿವೃದ್ಧಿ ಯೋಜನೆ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬ (೨೦೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ರೈತರ ಅಭಿವೃದ್ಧಿಗೆ ಸರ್ಕಾರವು ತೆಗೆದುಕೊಂಡ ಯೋಜನೆಗಳು ಯಾವುವು; ಈ ಯೋಜನೆಗೆ ನಿಗದಿಪಡಿಸಿದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅತಿವೃಷ್ಟಿಯಿಂದ ಮತ್ತು ಅನಾವೃಷ್ಠಿಯಿಂದ ಪ್ರಾಣಹಾನಿ ಮತ್ತು ಬೆಳೆ ಹಾನಿಗೆ ಒಳಗಾಗಿರುವ ಪ್ರಕರಣಗಳೆಷ್ಟು; ಇದಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; (ಕಳೆದ ಮೂರು ವರ್ಷಗಳ ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಈ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)

## ಲೋಕೋಪಯೋಗಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪ್ರಸ್ತಾವನೆ ಪ್ರಗತಿಯ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೯೭ (೧೫೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪ್ರಸ್ತಾವನೆ ಪ್ರಗತಿಯಲ್ಲಿದೆಯೇ; ಇದ್ದಲ್ಲಿ, ನಿಯಮಗಳ ತಿದ್ದುಪಡಿ ಪ್ರಕ್ರಿಯೆ ಯಾವಾಗಿನಿಂದ ಪ್ರಾರಂಭವಾಗಿದೆ;

(ಆ) ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪ್ರಸ್ತಾವನೆ ಅಂತಿಮಗೊಳಿಸಲು ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದ್ದು, ಇದುವರೆಗೆ ಯಾಕೆ ಪೂರ್ಣಗೊಂಡಿರುವುದಿಲ್ಲ;

(ಇ) ನಿಯಮಗಳ ತಿದ್ದುಪಡಿ ಪ್ರಕ್ರಿಯೆಯನ್ನು ಯಾವಾಗ ಅಂತಿಮಗೊಳಿಸಲಾಗುವುದು; ಇನ್ನೂ ಎಷ್ಟು ಕಾಲಾವಕಾಶ ಬೇಕು; ತಕ್ಷಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ರಾಷ್ಟ್ರೀಯ ಹೆದ್ದಾರಿ ೪ ರಲ್ಲಿಯ ಕರ ಸಂಗ್ರಹದ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೯೮ (೧೧೨) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಿಂದ ಬೆಳಗಾವಿಯವರೆಗೆ ರಾಷ್ಟ್ರೀಯ ಹೆದ್ದಾರಿ–೪ರಲ್ಲಿ ಎಂಟು ಕರ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಿದ್ದು, ಮತ್ತೆ ಹೆಚ್ಚಿಗೆ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದು ನಿಜವೇ; ನಿಜವಿದ್ದಲ್ಲಿ, ಎಲ್ಲಿ ಪ್ರಾರಂಭಿಸಲಾಗುವುದು;

(ಆ) ವಾಹನ ತೆರಿಗೆ ಕೊಡುತ್ತಿರುವ ರಾಜ್ಯದ ವಾಹನಗಳಿಗೆ ಮತ್ತೆ ಟ್ಯಾಕ್ಸ್ ಹಾಕಿದಂತಾಗುವುದಿಲ್ಲವೇ; ಬೆಳಗಾವಿಯಿಂದ ಬೆಂಗಳೂರಿಗೆ ಬರಬೇಕಾದರೆ ಒಂದು ವಾಹನ ಕನಿಷ್ಠ ೪೫೦ ರಿಂದ ೮೦೦–೧೦೦೦ದವರೆಗೆ ಕರ ಕೊಡುವುದು ಯಾವ ನ್ಯಾಯ, ಕರ ಸಂಗ್ರಹಣೆಗೆ ಯಾವ ಮಾರ್ಗಸೂಚಿ ಅನುಸರಿಸಲಾಗುವುದು;

(ಇ) ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬೈಪಾಸ್ ರಸ್ತೆ ಏಕಮುಖ ಮಾಡದೆ ಇರುವುದರಿಂದ, ಪ್ರತಿದಿನ ಅಪಘಾತಗಳು ಸಂಭವಿಸುತ್ತಿದ್ದು ಕಳೆದ ವರ್ಷದಲ್ಲಿ ೨೪೫ ಅಪಘಾತಗಳು ಸಂಭವಿಸಿರುವುದಲ್ಲದೆ ನೂರಾರು ಜನರು ಮರಣ ಹೊಂದಿರುವುದರಿಂದ ಹಾಗೂ ಅನೇಕ ಜನ ಈ ಅವಘಡದಲ್ಲಿ ಗಾಯಗೊಂಡಿರುವುದರಿಂದ ಸರ್ಕಾರ ಇದನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡಲು ತಕ್ಷಣ ಕ್ರಮ ಕೈಗೊಳ್ಳುವುದೇ?

## ಹುಬ್ಬಳ್ಳಿ–ಧಾರವಾಡ ನಡುವಿನ ಬೈಪಾಸ್ ರಾಷ್ಟ್ರೀಯ ಹೆದ್ದಾರಿ–೪ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೯೯ (೧೧೦) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ–ಧಾರವಾಡ ನಡುವೆ ನಿರ್ಮಿಸಿದ ರಾಷ್ಟ್ರೀಯ ಹೆದ್ದಾರಿ–೪ ಬೈಪಾಸ್ ರಸ್ತೆಯು ಎಷ್ಟು ಕಿ.ಮೀ ಇದೆ;

(ಆ) ಈ ರಸ್ತೆಯ ನಿರ್ಮಾಣಕ್ಕೆ ತಗುಲಿದ ವೆಚ್ಚವೆಷ್ಟು;

(ಇ) ಈ ರಸ್ತೆಯನ್ನು ಒಂದೇ ಲೈನ್ ಮಾಡಿರುವುದರಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ರಸ್ತೆಯ ಅಗಲ ಕಿರಿದಾಗಿರುವುದರಿಂದ ಪದೇ ಪದೇ ಅಪಘಾತಗಳಾಗುತ್ತಿರುವುದು ನಿಜವೇ;

(ಉ) ಈ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆಯೇ;

(ಊ) ಹಾಗಿದ್ದಲ್ಲಿ, ಈ ಕಾಮಗಾರಿ ಅನುಷ್ಠಾನಗೊಳಿಸಲು ಒದಗಿರುವ ಅನುದಾನ ಎಷ್ಟು?

## ರಾಜ್ಯದ ಕಬ್ಬು ಬೆಳೆಗಾರರ ಬಾಕಿ ಹಣ ಪಾವತಿಸುವ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೧೦೦ (೧೧೧) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳಿಂದ ಪಾವತಿಸಬೇಕಾಗಿರುವ ಬಾಕಿ ಹಣ ಎಷ್ಟು; (ಕಾರ್ಖಾನೆವಾರು ಮಾಹಿತಿ ನೀಡುವುದು)

(ಆ) ರಾಜ್ಯದ ರೈತರು ನೆರೆ ರಾಜ್ಯವಾದ ಗೋವಾದ ಕಾರ್ಖಾನೆಗಳಿಗೆ ಕಳುಹಿಸಿದ ಕಬ್ಬಿನ ಬಿಲ್ಲುಗಳನ್ನು ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಬಾಕಿ ಬಿಲ್ಲಿನ ಹಣವನ್ನು ರೈತರಿಗೆ ಕೊಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ೨೦೦೭–೦೮ರಲ್ಲಿ ರೈತರಿಗೆ ಪ್ರತಿ ಟನ್ನಿಗೆ ರೂ.೧೬೦/–ಗಳನ್ನು ಮಂಜೂರು ಮಾಡಿದ್ದ ಪ್ರೋತ್ಸಾಹ ಧನವನ್ನು ಪಾವತಿಸಲು ಸರ್ವೋಚ್ಚ ನ್ಯಾಯಾಲಯದ ಆದೇಶವಾಗಿರುವುದು ನಿಜವೇ ;

(ಉ) ಆಗಿದ್ದಲ್ಲಿ, ಈ ಪ್ರೋತ್ಸಾಹ ಧನವನ್ನು ರೈತರ ಖಾತೆಗೆ ಯಾವಾಗ ಜಮಾ ಮಾಡಲಾಗುವುದು ?

## ಉತ್ತರ ಕನ್ನಡ ಜಿಲ್ಲೆಯ ಕೃಷಿ ಉದ್ದೇಶಕ್ಕೆ ತೆಗೆದುಕೊಂಡ ವಿವಿಧ ಸಾಲಗಳನ್ನು ಕೃಷಿ ಸಾಲ ಎಂದು ಪರಿಗಣಿಸುವ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೧೦೧ (೧೦೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕೃಷಿ ಉದ್ದೇಶಕ್ಕಾಗಿ ಪ್ರಚಲಿತವಿರುವ ಸಾಲಗಳು ಯಾವುವು ;

(ಆ) ಈ ಸಾಲಗಳನ್ನು ಕೃಷಿ ಸಾಲಗಳೆಂದು ಪರಿಗಣಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಉದ್ದೇಶಿಸಿದೆಯೇ ;

(ಇ) ಉತ್ತರ ಕನ್ನಡ ಜಿಲ್ಲೆಯ ರೈತರ ಪಡೆದ ಆಸಾಮಿ ಸಾಲ, ಬಳಕೆ ಸಾಲ, ಕೃಷಿ ಅಲ್ಪಾವಧಿ ಸಾಲ ಮತ್ತು ಕೃಷಿ ಅಭಿವೃದ್ಧಿ ಸಾಲಗಳನ್ನು ಮನ್ನಾ ಮಾಡಲು ವಿಶೇಷ ಪ್ಯಾಕೇಜನ್ನು ರೂಪಿಸಿ ನಬಾರ್ಡ್‌ನಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ ;

(ಈ) ನಿಜವಾಗಿದ್ದಲ್ಲಿ, ಅನುಷ್ಠಾನಗೊಳಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ ?

## ದೇವದುರ್ಗ–ಗೂಗಲ್ ರಸ್ತೆ ಪ್ರಾರಂಭಿಸದ ಬಗ್ಗೆ (ರಾಯಚೂರು ಜಿಲ್ಲೆ)

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೨ (೧೮೯) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) Appendix-E ನಲ್ಲಿ Deodurga - Googal ರಸ್ತೆ ಮಂಜೂರಾಗಿ, ಟೆಂಡರ್ ಆಗಿದ್ದು ಮೂರು ವರ್ಷಗಳಾದರೂ ಕಾಮಗಾರಿ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಮೂರು ವರ್ಷಗಳಲ್ಲಿ ರಸ್ತೆ ನಿರ್ವಹಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಸಕ್ಕರೆ ಇಲಾಖೆ ಯೋಜನೆಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೩ (೨೮೩) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸಕ್ಕರೆ ಇಲಾಖೆಯ ಕರ್ತವ್ಯ ಹಾಗೂ ಜವಾಬ್ದಾರಿಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಸಕ್ಕರೆ ಇಲಾಖೆಯಲ್ಲಿರುವ ಯೋಜನೆಗಳು, ಸದರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯದ ಪಾಲುಗಳೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಇ) ಸಕ್ಕರೆ ಇಲಾಖೆಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಎಷ್ಟು ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ ಹಾಗೂ ಇಲ್ಲಿಯವರೆಗೆ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ಬಳಕೆ ಮಾಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಸಕ್ಕರೆ ಇಲಾಖೆಯಲ್ಲಿರುವ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇರುವ ನಿಯಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಉ) ೨೦೧೪ ರಿಂದ ಇಲ್ಲಿಯವರೆಗೆ ತಮ್ಮ ಇಲಾಖೆಯಿಂದ ಅನುದಾನವನ್ನು ಪಡೆದುಕೊಂಡ ಸಹಕಾರ ಸಂಘ, ಕಾರ್ಖಾನೆಗಳ ವಿವರಗಳನ್ನು ಅನುದಾನದ ಮೊತ್ತ ಸಮೇತ ನೀಡುವುದು ?

## ರಾಜ್ಯದಲ್ಲಿನ ಮಿನಿ ವಿಧಾನಸೌಧಗಳು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೪ (೨೫೫) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಿರ್ಮಾಣಗೊಂಡಿರುವ ಮಿನಿ ವಿಧಾನ ಸೌಧಗಳ ಸಂಖ್ಯೆಗಳು ಎಷ್ಟು ; (ಜಿಲ್ಲೆ ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಮಿನಿ ವಿಧಾನ ಸೌಧಗಳು ಸರ್ಕಾರದ ಮಾರ್ಗಸೂಚಿಗಳನ್ವಯ ನಿರ್ಮಾಣಗೊಂಡಿವೆಯೇ ; ಈ ಮಿನಿ ವಿಧಾನ ಸೌಧಗಳ ನಿರ್ಮಾಣದ ಉದ್ದೇಶಗಳೇನು ಎಂಬುವುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ವಿಜಯಪುರ ನಗರದ ವಿಜಯಪುರ ಜಿಲ್ಲಾ ಕೇಂದ್ರ ಸ್ಥಾನವಾದ ನಗರದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣಕ್ಕೆ ಮಂಜೂರಾದ ಅನುದಾನವೆಷ್ಟು; ಮತ್ತು ಎಷ್ಟು ಇಲಾಖೆಗಳು ಈ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ; (ವಿವರವಾದ ಮಾಹಿತಿ ನೀಡುವುದು)

(ಈ) ವಿಜಯಪುರದಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣದಿಂದ ಸರ್ಕಾರದ ಮೂಲ ಉದ್ದೇಶ ಈಡೇರಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಅಭಾವ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೫ (೨೪೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿದ್ಯುತ್ ಸಮಸ್ಯೆಯನ್ನು ನೀಗಿಸಲು ಸರ್ಕಾರ ಕೈಕೊಂಡ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳು ಸಾಕಷ್ಟು ಬಿಸಿಲು ಪ್ರದೇಶಗಳಿಂದ ಕೂಡಿದ್ದು ಈ ಪ್ರದೇಶಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಕುರಿತು ಸರ್ಕಾರದ ಯಾವುದಾದರೂ ಯೋಜನೆಗಳಿವೆಯೇ ; ಇದ್ದಲ್ಲಿ, ಸರ್ಕಾರ ಕೈಕೊಂಡ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಹೆಸ್ಕಾಂ ಸಿಬ್ಬಂದಿಗೆ ಕೆಲಸದ ಸಮಯದಲ್ಲಿ ಜೀವ ರಕ್ಷಣೆಗಾಗಿ ಜೀವರಕ್ಷಣಾ ಕಿಟ್ಟುಗಳನ್ನು ನೀಡದಿರುವ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ;

## ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೇಂದ್ರದ "ಅಮೃತ" ಯೋಜನೆಯಲ್ಲಿ ಆಯ್ಕೆಯಾದ ನಗರಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೬ (೨೩೭) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕೋಪಯೋಗಿ ಇಲಾಖೆಯಲ್ಲಿರುವ ಯೋಜನೆಗಳು ಯಾವುವು ; ಸದರಿ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನವೆಷ್ಟು ; ಅದರಲ್ಲಿ ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಪಾಲು ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಲೋಕೋಪಯೋಗಿ ಇಲಾಖೆಯಲ್ಲಿರುವ ಯೋಜನೆಗಳ ಕುರಿತು ಸಾರ್ವಜನಿಕರ ಗಮನಕ್ಕೆ ತರಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಲೋಕೋಪಯೋಗಿ ಇಲಾಖೆಯಲ್ಲಿ ಮಂಜೂರಾದ ವೃಂದವಾರು, ಜಿಲ್ಲಾವಾರು ಹುದ್ದೆಗಳೆಷ್ಟು ; ಸದರಿ ಹುದ್ದೆಗಳಲ್ಲಿ ಖಾಲಿ ಇರುವ ವೃಂದವಾರು, ಜಿಲ್ಲಾವಾರು ಹುದ್ದೆಗಳ ಮಾಹಿತಿ ನೀಡುವುದು ;

(ಈ) ಲೋಕೋಪಯೋಗಿ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ನೇಮಕವಾದ ಸಿಬ್ಬಂದಿಗಳ ಪೈಕಿ ಬೇರೆ ಇಲಾಖೆಗೆ ಖಾಯಂ

ಆಗಿ ಇಲ್ಲವೆ ಎರವಲು ಸೇವೆ ಮೇಲೆ ಹೋದ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಹೆಸರು, ಸದ್ಯ ನಿರ್ವಹಿಸುತ್ತಿರುವ ಇಲಾಖೆ ಹಾಗೂ ಹುದ್ದೆ, ಎಷ್ಟು ವರ್ಷಗಳಿಂದ ಬೇರೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ ಈ ಎಲ್ಲಾ ಸಂಪೂರ್ಣ ವಿವರಗಳನ್ನು ನೀಡುವುದು ;

(ಉ) ಎರವಲು ಸೇವೆಯ ಮೇಲೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಹೋಗಲು ಇರುವ ನಿಯಮಗಳೇನು, ಹಾಗೂ ಒಂದು ಸಾರಿ ಎರವಲು ಸೇವೆಗೆ ಹೋದ ಮೇಲೆ ಎಷ್ಟು ವರ್ಷ ಎರವಲು ಸೇವೆಯಲ್ಲಿ ಮುಂದುವರೆಯಲು ಅವಕಾಶವಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿರುವ ಯೋಜನೆಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೦೭ (೨೩೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಶುಸಂಗೋಪನೆ ಇಲಾಖೆಯಲ್ಲಿರುವ ಯೋಜನೆಗಳು ಯಾವುವು ; ಸದರಿ ಯೋಜನೆಯಲ್ಲಿ ರಾಜ್ಯದ ಹಾಗೂ ಕೇಂದ್ರದ ಪಾಲುಗಳೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಪಶುಸಂಗೋಪನಾ ಇಲಾಖೆಯಲ್ಲಿರುವ ಯೋಜನೆಗಳನ್ನು ಪಡೆದುಕೊಳ್ಳಲು ಇರುವ ನಿಯಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ೨೦೧೫–೧೬ ಸಾಲಿನಿಂದ ಇಲ್ಲಿಯವರೆಗೆ ಪಶುಸಂಗೋಪನಾ ಇಲಾಖೆಯಿಂದ ಯಾವ ಯಾವ ಯೋಜನೆಯಡಿ ಎಷ್ಟು

ಫಲಾನುಭವಿಗಳು ಲಾಭ ಪಡೆದುಕೊಂಡಿರುತ್ತಾರೆ ; ಅದರ ಸಂಪೂರ್ಣ ವಿವರಗಳನ್ನು ಫಲಾನುಭವಿ ಹೆಸರು ಸಮೇತ ಜಿಲ್ಲಾವಾರು ಮಾಹಿತಿ ನೀಡುವುದು ;

(ಈ) ಪಶುಸಂಗೋಪನಾ ಇಲಾಖೆಯಿಂದ ಇಲ್ಲಿಯವರೆಗೆ ನೀಡಿದಂತಹ ಜಾನುವಾರುಗಳ ಪೈಕಿ ಎಷ್ಟು ಜಾನುವಾರುಗಳು ಮೃತಪಟ್ಟಿರುತ್ತವೆ ; ಆರ್ಥಿಕ ವರ್ಷವಾರು ವಿತರಣೆಯಾದ ವಿವರ ಹಾಗೂ ಅದರಲ್ಲಿ ಮೃತವಾದಂತಹ ಜಾನುವಾರುಗಳ ವಿವರಗಳನ್ನು ಜಿಲ್ಲಾವಾರು ಮಾಹಿತಿ ನೀಡುವುದು ? (ವಿತರಿಸಲಾದ ಹಾಗೂ ಮೃತ ಹೊಂದಿದ ಜಾನುವಾರುಗಳ ಶೇಕಡಾವಾರು ಮಾಹಿತಿ ನೀಡುವುದು)

## ರಾಯಚೂರು ಹಾಗೂ ಮಾನ್ವಿ ತಾಲ್ಲೂಕಿನ ಉಪಮಾರುಕಟ್ಟೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೮ (೨೫೬) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಾಯಚೂರು ಹಾಗೂ ಮಾನ್ವಿ ತಾಲ್ಲೂಕಿನ ಉಪಮಾರುಕಟ್ಟೆಗಳನ್ನು ರೈತರ ಅನುಕೂಲಕ್ಕಾಗಿ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ನೂತನವಾಗಿ ಘೋಷಣೆಯಾಗಿರುವ ಪಟ್ಟಣ ಪಂಚಾಯಿತಿಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೯ (೨೫೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೂತನವಾಗಿ ಘೋಷಣೆಯಾಗಿರುವ ಪಟ್ಟಣ ಪಂಚಾಯತಿಗಳಿಗೆ ಅನುದಾನ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಸದರಿ ನೂತನವಾಗಿ ಘೋಷಣೆಯಾಗಿರುವ ಪಟ್ಟಣ ಪಂಚಾಯತಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ಜಿಲ್ಲೆಯ ನಗರೋತ್ಥಾನ ೩ನೇ ಹಂತ ಗೆ ವಿವಿಧ ನಗರ ಸಭೆ ಹಾಗೂ ಪುರಸಭೆಗಳಿಗೆ ಅನುದಾನ ನೀಡುವ ಪ್ರಸ್ತಾವನೆ ಸರ್ಕಾರ ಮುಂದಿದೆಯೇ ; ಹಾಗಿದ್ದಲ್ಲಿ, ಒಟ್ಟು ಎಷ್ಟು ಅನುದಾನ ನೀಡಲಾಗಿದೆ ? (ವಿವರ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೦ (೨೫೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ನೇ ಸಾಲಿನಲ್ಲಿ ರಾಯುಚೂರು, ಮಾನ್ವಿ ತಾಲ್ಲೂಕುಗಳಲ್ಲಿ ೧೧೦/೧೧K.V. ವಿದ್ಯುತ್ ಉಪ ಕೇಂದ್ರಗಳನ್ನು Sub-Stations ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಮಾನ್ವಿ ತಾಲ್ಲೂಕಿನಲ್ಲಿ ಬರುವ ಹರವಿ, ಕುರಕುಂದಾ ಹಾಗೂ ಆಡವಿ ಅಮರೇಶ್ವರ ಗ್ರಾಮಗಳು ೧೧೦/೧೧K.V. ವಿದ್ಯುತ್ ಉಪ ಕೇಂದ್ರಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರಿನಲ್ಲಿ ನೂತನವಾಗಿ ನಿರ್ಮಾಣವಾಗಿರುವ ೮೦೦ ಮೆಗಾವ್ಯಾಟ್ Y.T.P.Sನ್ನು ಯಾವಾಗ ಕಾರ್ಯರಂಭಗೊಳಿಸಲಾಗುತ್ತಿದೆ ;

(ಈ) ರಾಯಚೂರು ತಾಲ್ಲೂಕಿನಲ್ಲಿ ರೈತರ ಪಂಪ್‌ಸೆಟ್‌ಗಳಿಗೆ III Phase ವಿದ್ಯುತ್ ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ರಾಯಚೂರು ಜಿಲ್ಲೆಯಲ್ಲಿ ಸರ್ಕಾರ ಸೋಲಾರ್ (Solar) ವಿದ್ಯುತ್ ಉತ್ಪಾದನೆ ಮಾಡಲು ಸರ್ಕಾರ ಅನುಮತಿ ನೀಡಿದೆಯೇ ; ಹಾಗಿದ್ದಲ್ಲಿ ಎಷ್ಟು ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಅನುಮತಿ ನೀಡಿದೆ ?

## ಪಶುಭಾಗ್ಯ ಯೋಜನೆ ಕುರಿತು

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧ (೨೫೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

೨೦೧೬–೧೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ "ಪಶುಭಾಗ್ಯ ಯೋಜನೆ" ಜಾರಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಮೇಲ್ಛಾವಣಿಯಿಂದ ಸೋಲಾರ್ ವಿದ್ಯುತ್ ಉತ್ಪಾದಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೧೨ (೨೨೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸೋಲಾರ್‌ನಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ ;

(ಆ) ಸದರಿ ಯೋಜನೆಯಡಿ ಎಷ್ಟು ಜನರಿಗೆ ಮೇಲ್ಛಾವಣಿ (Roof Top) ಸೋಲಾರ್‌ನಿಂದ ವಿದ್ಯುತ್ (೦.೫ ಮೆಗಾವ್ಯಾಟ್‌ನಿಂದ

೧ ಮೆಗಾವ್ಯಾಟ್ ಅಥವಾ ಹೆಚ್ಚಿಗೆ) ಉತ್ಪಾದನೆ ಮಾಡಲು ಪಿ.ಪಿ.ಎ ನೀಡಲಾಗಿದೆ ; (ಜಿಲ್ಲಾವಾರು/ತಾಲ್ಲೂಕುವಾರು ಸಂಖ್ಯೆಗಳ ವಿವರ ನೀಡುವುದು)

(ಇ) ಹಾಲಿ ನೀಡಿರುವ ಪಿ.ಪಿ.ಎ ಗಳಲ್ಲಿ ಎಷ್ಟು ಪಿ.ಪಿ.ಎ ಗಳನ್ನು ರದ್ದುಗೊಳಿಸಲಾಗಿದೆ ; ರದ್ದುಗೊಳಿಸಲು ಕಾರಣಗಳೇನು ; (ವಿವರ ನೀಡುವುದು)

(ಈ) ಪಿ.ಪಿ.ಎ ಪಡೆದ ಜನರು ಎಷ್ಟು ವಿದ್ಯುತ್ ಉತ್ಪಾದಿಸುತ್ತಿದ್ದಾರೆ ; ಅಥವಾ ಈ ಸಂಬಂಧ ಕಾಮಗಾರಿಗಳು ಯಾವ ಹಂತದಲ್ಲಿವೆ ; (ವಿವರವಾದ ಮಾಹಿತಿ ನೀಡುವುದು)

(ಉ) ಕೋಲಾರ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಪಿ.ಪಿ.ಎ ಗಳನ್ನು ರದ್ದುಗೊಳಿಸಲಾಗಿದೆ ; ಪಡೆದವರೆಷ್ಟು ಹಾಗೂ ಉಳಿದವರೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಕೃಷಿ ಯಂತ್ರ ಕೇಂದ್ರಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೧೩ (೨೧೯) ಮಾನ್ಯ ಕೃಷ್ಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ರೈತರಿಗೆ ವ್ಯವಸಾಯ ಮಾಡುವ ಸಂಬಂಧ ಕೃಷಿ ಯಂತ್ರಗಳನ್ನು ಬಾಡಿಗೆ ನೀಡುವ ಯೋಜನೆ ಸರ್ಕಾರದಲ್ಲಿ ಜಾರಿಯಲ್ಲಿದೆಯೇ ; ಇದ್ದಲ್ಲಿ ಇದರ ರೂಪುರೇಷೆ, ನೀತಿ–ನಿಯಮಾವಳಿಗಳೇನು ;

(ಆ) ಈ ಯೋಜನೆಯಿಂದ ರೈತರಿಗೆ ಆಗುವ ಲಾಭಗಳೇನು ; ಇಲ್ಲಿಯವರೆಗೆ ಎಷ್ಟು ಜನ ರೈತರು ಇದರ ಪ್ರಯೋಜನ ಪಡೆದಿರುತ್ತಾರೆ ; (ಜಿಲ್ಲಾವಾರು ಅಂಕಿ–ಅಂಶಗಳನ್ನು ನೀಡುವುದು)

(ಇ) ಕೃಷಿ ಯಂತ್ರಗಳನ್ನು ಬಾಡಿಗೆಗೆ ನೀಡುವ ಹಾಗೂ ನಿರ್ವಹಿಸುವ ಕೆಲಸವನ್ನು ಯಾವ ಸಂಸ್ಥೆಗಳಿಗೆ ವಹಿಸಲಾಗಿದೆ; ಇವುಗಳಿಗೆ ಯಾವ ರೀತಿ ಇಲಾಖೆಯು ಹಣ ನೀಡುತ್ತವೆ; (ವಿವರವಾದ ಮಾಹಿತಿ ನೀಡುವುದು)

(ಈ) ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಯಾವ ಯಾವ ಸಂಸ್ಥೆಗಳು ಈ ಕೆಲಸವನ್ನು ನಿರ್ವಹಿಸುತ್ತಿವೆ ಹಾಗೂ ಇಲಾಖೆಯಿಂದ ಪಡೆದ ಹಣವೆಷ್ಟು? (ತಾಲ್ಲೂಕು/ ಹೋಬಳಿಯೊಂದಿಗೆ ವಿವರವಾಗಿ ಮಾಹಿತಿ ನೀಡುವುದು)

## ಸಾರ್ವಜನಿಕ ಉದ್ದಿಮೆಗಳ ಲಾಭ–ನಷ್ಟದ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೧೪ (೨೧೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಯಾವುವು; ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಲಾಭ–ನಷ್ಟ ಹಾಗೂ ಕ್ರೂಢೀಕೃತ ನಷ್ಟ ಅಂದರೆ ಏನು ; (ವಿವರವಾಗಿ ಮಾಹಿತಿ ಕೊಡುವುದು)

(ಆ) ಸಾರ್ವಜನಿಕ ಉದ್ದಿಮೆಗಳು ದಿನಾಂಕ: ೦೧–೦೪–೨೦೦೧ರಿಂದ ದಿನಾಂಕ: ೦೧–೦೪–೨೦೧೬ ರವರೆಗೆ ಗಳಿಸಿದ ಲಾಭ, ನಷ್ಟ, ಹಾಗೂ ಕ್ರೂಢೀಕೃತ ಎಷ್ಟು; (ಉದ್ದಿಮೆವಾರು, ವರ್ಷವಾರು, ಮಾಹಿತಿ ನೀಡುವುದು

(ಇ) ದಿನಾಂಕ: ೦೧–೦೪–೨೦೦೧ ರಿಂದ ದಿನಾಂಕ: ೦೧–೦೪–೨೦೧೬ರವರೆಗೆ ತನ್ನ ಕ್ರೂಢೀಕೃತ ನಷ್ಟದ ಶೇಕಡಾ ೩೦ ಕ್ಕಿಂತ

ಹೆಚ್ಚಿಗೆ ಲಾಭ ಗಳಿಸಿದ ಸಾರ್ವಜನಿಕ ಉದ್ದಿಮೆಗಳಾವುವು ? (ಉದ್ದಿಮೆಗಳ ಹೆಸರು, ಲಾಭ ಗಳಿಸಿದ ವರ್ಷ ಇತ್ಯಾದಿಗಳೊಂದಿಗೆ ವಿವರವಾದ ಮಾಹಿತಿ ನೀಡುವುದು)

## ಎನ್.ಜೆ.ವೈ. ವಿದ್ಯುತ್ ಯೋಜನೆ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೧೫ (೨೨೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನಿರಂತರ ಜ್ಯೋತಿ ಯೋಜನೆ (ಎನ್.ಜೆ.ವೈ)ಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ ; ಇದರ ರೂಪುರೇಷೆಗಳೇನು ; (ವಿವರವಾದ ಮಾಹಿತಿ ನೀಡುವುದು)

(ಆ) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಈ ಯೋಜನೆ ಜಾರಿಯಲ್ಲಿದೆಯೇ ; ಇದಕ್ಕಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ ;

(ಇ) ಗುಬ್ಬಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಈ ಯೋಜನೆಯಡಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಇದರ ಸಂಬಂಧ ಎಷ್ಟು ಹಣ ಪಾವತಿಸಲಾಗಿದೆ ; ಗುತ್ತಿಗೆ ಪಡೆದ ಸಂಸ್ಥೆ ಯಾವುದು ; (ವಿವರವಾದ ಮಾಹಿತಿ ನೀಡುವುದು)

(ಈ) ಈ ಯೋಜನೆಯಡಿ ಗುಬ್ಬಿ ತಾಲ್ಲೂಕಿನ ಕಾಮಗಾರಿಗಳಿಗೆ ಎಷ್ಟು ಹಣದ ಅಂದಾಜು ಪಟ್ಟಿ ತಯಾರಿಸಲಾಗಿದೆ ; ಎಷ್ಟು ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ ; ಹಾಗೂ ಎಷ್ಟು ಹಣ ಪಾವತಿಸಲಾಗಿದೆ ? (ವಿವರವಾದ ಮಾಹಿತಿ ನೀಡುವುದು)

## ತೋಟಗಾರಿಕೆ ಇಲಾಖೆಯ ಹನಿ ನೀರಾವರಿ ಯೋಜನೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೬ (೨೨೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯ ಹನಿ ನೀರಾವರಿ ಯೋಜನೆಗೆ ಕಳೆದ ಎರಡು ವರ್ಷಗಳಿಂದ ಎಷ್ಟು ಹಣ ಒದಗಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಎಷ್ಟು ಜನ ಫಲಾನುಭವಿಗಳಿಗೆ ಈ ಸೌಲಭ್ಯ ನೀಡಲಾಗಿದೆ ; ಅವರಿಗೆ ನೀಡಿರುವ ಸಹಾಯಧನದ ಮೊತ್ತ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಕೃಷಿ ಚಟುವಟಿಕೆಗಳಿಗೆ ಸಹಾಯಧನ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೭ (೨೨೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಚಟುವಟಿಕೆಗಳಿಗೆ ಬೇಕಾದ ಯಾವ ಯಾವ ಸಲಕರಣೆಗಳಿಗೆ ಸರ್ಕಾರ ಸಹಾಯಧನ ನೀಡುತ್ತಿದೆ ;

(ಆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನರಿಗೆ ಈ ಸಹಾಯಧನ ನೀಡಲಾಗಿದೆ ; ಇನ್ನೂ ಎಷ್ಟು ಜನರಿಗೆ ಬಾಕಿ ನೀಡಬೇಕಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದಕ್ಕಾಗಿ ಹೆಚ್ಚಿನ ಅನುದಾನ ಮೀಸಲಿಟ್ಟು ತಕ್ಷಣವೇ ಸಹಾಯಧನ ಬಿಡುಗಡೆ ಮಾಡಿ ರೈತರಿಗೆ ಸಹಾಯ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತದೆಯೇ ?

# ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪಿತ ಸಾಮರ್ಥ್ಯದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೧೮ (೧೧೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಘಟಕಗಳ ಸಂಖ್ಯೆ ಎಷ್ಟು ; ಅವುಗಳ ಸ್ಥಾಪಿತ ಸಾಮರ್ಥ್ಯದೊಂದಿಗೆ ಜಿಲ್ಲಾವಾರು ವಿವರ ನೀಡುವುದು ; (ಜಲ ವಿದ್ಯುತ್, ಉಷ್ಣ ವಿದ್ಯುತ್, ಅಣು ವಿದ್ಯುತ್ ಹಾಗೂ ಇತರ ಮೂಲಗಳು)

(ಆ) ರಾಜ್ಯದಲ್ಲಿ ಉತ್ಪಾದನೆಯಾಗುವ ಎಷ್ಟು ಪ್ರತಿಶತ ವಿದ್ಯುತ್‌ನ್ನು ಬೆಂಗಳೂರಿಗಾಗಿ ವಿನಿಯೋಗಿಸಲಾಗುತ್ತಿದೆ ;

(ಇ) ರಾಜ್ಯದ ಒಟ್ಟು ಉತ್ಪಾದನೆಯ ಸುಮಾರು ೪೦ ಪ್ರತಿಶತ (ಅಂದಾಜು) ವಿದ್ಯುತ್ ಅನ್ನು ಉಪಯೋಗಿಸುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಂತ ಉಪಯೋಗಕ್ಕಾಗಿ ವಿದ್ಯುತ್ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು

(ಈ) ರಾಜ್ಯದಲ್ಲಿ ವಿದ್ಯುತ್ ಬಳಕೆಯ ಪ್ರಮಾಣ ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ೨೫ ವರ್ಷಗಳ ಬೇಡಿಕೆಯನ್ನು ಗಮನದಲ್ಲಿರಿಸಿ ರಾಜ್ಯದ ಜನತೆಗೆ ೨೪x೭ ವಿದ್ಯುತ್ ಸಂಪರ್ಕ ಒದಗಿಸಲು ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈ ಗುರಿಯನ್ನು ತಲುಪಲು ಇರುವ ಅಡಚಣೆಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ಸಾವಯವ ಕೃಷಿ ಭಾಗ್ಯ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೧೯ (೧೧೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಾವಯವ ಕೃಷಿ ಪ್ರೋತ್ಸಾಹಿಸುವ ದೃಷ್ಟಿಯಲ್ಲಿ ಅನುಷ್ಠಾನಗೊಳಿಸಿರುವ ಸಾವಯವ ಭಾಗ್ಯ ಯೋಜನೆಯ ವಿವರಗಳನ್ನು ನೀಡುವುದು ;

(ಆ) ಈ ಯೋಜನೆಯನ್ನು ಜಿಲ್ಲಾವಾರು ಅನುಷ್ಠಾನಗೊಳಿಸುವಲ್ಲಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಮಾಡಿದ ಜಿಲ್ಲಾವಾರು ವೆಚ್ಚದ ವಿವರ ನೀಡುವುದು ;

(ಇ) ಈ ಯೋಜನೆಯ ಅನುಷ್ಠಾನಕ್ಕಾಗಿ ಫಲಾನುಭವಿಗಳನ್ನು ಗುರುತಿಸಲು ಅಳವಡಿಸಲಾದ ಮಾನದಂಡಗಳೇನು ? (ವಿವರ ನೀಡುವುದು)

## ಭೂಚೇತನ–೨ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೨೦ (೧೧೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂಚೇತನ–೨ ಕಾರ್ಯಕ್ರಮವನ್ನು ರಾಜ್ಯದಲ್ಲಿ ಎಂದಿನಿಂದ ಅಳವಡಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಭೂಚೇತನ ಕಾರ್ಯಕ್ರಮದ ಅನ್ವಯ ಯಾವ ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಭೂಚೇತನ ಚಟುವಟಿಕೆಗಳನ್ನು ಕೈಗೊಳ್ಳಲು ನಿಗದಿಪಡಿಸಿರುವ ಮಾನದಂಡಗಳೇನು ;

(ಈ) ಭೂಚೇತನ ಕಾರ್ಯಕ್ರಮ ಅನುಷ್ಠಾನಕ್ಕೆ ಒಟ್ಟು ಎಷ್ಟು ಹಣ ಖರ್ಚು ಮಾಡಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೨೧ (೧೧೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೃಷಿ ಭಾಗ್ಯ ಯೋಜನೆಯಡಿ ರಾಜ್ಯದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ; ಅದಕ್ಕೆ ತಗುಲಿದ ವೆಚ್ಚ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ; ಫಲಾನುಭವಿಗಳನ್ನು ಗುರುತಿಸಲು ಅನುಸರಿಸಿದ ಮಾನದಂಡಗಳೇನು ? (ಜಿಲ್ಲಾವಾರು ವಿವರ ನೀಡುವುದು)

## ರಾಜ್ಯದಲ್ಲಿರುವ ಸಹಕಾರಿ ಸಂಘಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೧೨೨ (೧೧೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೋಂದಾಯಿತವಾದ ಒಟ್ಟು ಸಹಕಾರಿ ಸಂಘಗಳೆಷ್ಟು ; (ರಾಜ್ಯಮಟ್ಟದ, ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಪ್ರತ್ಯೇಕ ವಿವರ ನೀಡುವುದು)

(ಆ) ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಬ್ಯಾಂಕುಗಳ ಸಂಖ್ಯೆ ಎಷ್ಟು ;

(ಇ) ಈ ಬ್ಯಾಂಕುಗಳ ಕಳೆದ ೩ ವರ್ಷಗಳ ಲಾಭ ನಷ್ಟದ ವಿವರಗಳನ್ನು ಒದಗಿಸುವುದು ;

(ಈ) ನಷ್ಟದಲ್ಲಿರುವ ಬ್ಯಾಂಕುಗಳ ಪುನಃಶ್ಚೇತನಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಬಿ.ಸಿ. ರೋಡ್ ಅಡ್ಡ ಹೊಳೆ ಚತುಷ್ಪಥ ರಸ್ತೆ ಮತ್ತು ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೩ (೨೧೦) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬಿ.ಸಿ. ರೋಡ್ ನಿಂದ ಹಾಸನ ಅಡ್ಡ ಹೊಳೆಯವರೆಗಿನ ಚತುಷ್ಪಥ ರಸ್ತೆ ಕಾಮಗಾರಿಯು ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಒಳಗೊಂಡಿದೆಯೇ ;

(ಆ) ಸದರಿ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಈಗಾಗಲೇ ಟೆಂಡರ್ ನಡೆದು ಒಂದು ಸಂಸ್ಥೆಗೆ ವಹಿಸಿದ ನಂತರ ಅದೇ ರಸ್ತೆಯ ಶಿರಾಡಿ ಘಾಟ್ ಭಾಗವನ್ನು ಅಭಿವೃದ್ಧಿಪಡಿಸಲು ಇನ್ನೊಂದು ಸಂಸ್ಥೆಗೆ ನೀಡುವ ಔಚಿತ್ಯವೇನು ;

(ಇ) ಇದರಿಂದಾಗಿ ಕೇಂದ್ರ ಸರ್ಕಾರದ ಅನುದಾನ ವ್ಯರ್ಥವಾಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಉ) ಅಡ್ಡ ಹೊಳೆ ಬಿ.ಸಿ. ರೋಡ್ ಚತುಷ್ಪಥ ರಸ್ತೆಯೊಂದಿಗೆ ಶಿರಾಡಿ ಘಾಟ್ ರಸ್ತೆಯ ಅಭಿವೃದ್ಧಿ ಒಗ್ಗೂಡಿಸಿ ೨ನೇ ಹಂತದ ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿಯ ಅನುದಾನ ವ್ಯರ್ಥವಾಗದಂತೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು ?

## ಪಶುಪಾಲನಾ ಇಲಾಖೆಯ ಸಿಬ್ಬಂದಿಗಳಿಗೆ ವೇತನ ನೀಡದಿರುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೪ (೨೧೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಶುಪಾಲನಾ ಇಲಾಖೆಯ ಅಧಿಕಾರಿಗಳು, ನೌಕರರಿಗೆ ಸಕಾಲದಲ್ಲಿ ವೇತನ ಪಾವತಿಯಾಗದಿರುವುದು ನಿಜವೇ ; ವೇತನ ಪಾವತಿಗೆ ಇರುವ ತೊಡಕುಗಳೇನು ;

(ಆ) ವೇತನವಿಲ್ಲದೇ ಪರದಾಡುತ್ತಿರುವ ನೌಕರರು, ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಕ್ಕೆ ಅಸಹಕಾರ ತೋರುವವರಿಗೆ ಎಚ್ಚರಿಕೆ ನೀಡಲು ಮುಂದಾಗಿರುವುದು ನಿಜವೇ ;

(ಇ) ನಿಗದಿತ ಸಮಯದಲ್ಲಿ ವೇತನ ಪಾವತಿ ಮಾಡದಿರುವುದು ಇಲಾಖಾ ಕಾರ್ಯಕ್ರಮ ಅನುಷ್ಠಾನದಲ್ಲಿ ನೌಕರರಲ್ಲಿ ನಿರಾಸೆ ಮೂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಬಂದಿದ್ದಲ್ಲಿ, ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದನ್ನು ಖಾತ್ರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

# ಸರ್ಕಾರಿ ಅತಿಥಿಗೃಹಗಳು ಲಭ್ಯತೆ ಇಲ್ಲದಿರುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೫ (೨೧೧) ಮಾನ್ಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸರ್ಕಾರಿ ಅತಿಥಿಗೃಹಗಳನ್ನು ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ತಿಂಗಳುಗಳ ಕಾಲ ವಾಸ್ತವ್ಯಕ್ಕೆ ಪಡೆಯುವುದರಿಂದ ಜನ ಪ್ರತಿನಿಧಿಗಳಿಗೆ ಹಾಗೂ ಇತರ ಅಧಿಕಾರಿಗಳಿಗೆ ಪ್ರವಾಸದ ವೇಳೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಉಡುಪಿ ಜಿಲ್ಲೆಯ ಉಡುಪಿಯಲ್ಲಿನ ಅತಿಥಿಗೃಹದ ಎಷ್ಟು ಕೊಠಡಿಗಳನ್ನು ಹೀಗೆ ದೀರ್ಘಾವಧಿಗೆ ನೀಡಲಾಗಿದೆ; ಯಾವ ಇಲಾಖೆಯ ಎಷ್ಟು ಮಂದಿಗೆ ನೀಡಲಾಗಿದೆ;

(ಇ) ಹೀಗೆ ತಿಂಗಳುಗಳ ಕಾಲ ಸಂಪೂರ್ಣ ವಸತಿ ಗೃಹಗಳನ್ನು ನೀಡುವ ಬಗ್ಗೆ ಇರುವ ಆದೇಶಗಳೇನು; (ಪ್ರತಿ ಒದಗಿಸುವುದು)

(ಈ) ಸರ್ಕಾರಿ ಅತಿಥಿಗೃಹಗಳಲ್ಲಿ ಸ್ವಚ್ಛತೆ ಕಾಪಾಡುವುದು ತಿಂಗಳುಗಳ ಕಾಲ ದೀರ್ಘಾವಧಿಗೆ ನೀಡುವುದನ್ನು ತಡೆಯುವುದು ಸೇರಿದಂತೆ ಪ್ರವಾಸ ಸಾರ್ವಜನಿಕ ಭೇಟಿಯ ವೇಳೆ ಅತಿಥಿ ಗೃಹ ಲಭ್ಯವಿರುವಂತೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ಒದಗಿಸುವುದು)

# ಬೆಳಗಾವಿ ಜಿಲ್ಲೆಯ ಪಶು ವೈದ್ಯ ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯ ಒದಗಿಸದೇ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೬ (೨೧೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಪಶು ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ಆಸ್ಪತ್ರೆ ಕಟ್ಟಡ, ಜಾನುವಾರುಗಳ ಮಾರಕ ರೋಗಗಳಿಗೆ ಚುಚ್ಚುಮದ್ದು, ನುರಿತ ತಜ್ಞ ವೈದ್ಯರು ಇಲ್ಲದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಪಶು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ; ಅವು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಯಾವ ಯಾವ ಪಶು ಆಸ್ಪತ್ರೆಗಳಲ್ಲಿ ಪೂರ್ಣಾವಧಿಯ ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; ಒಟ್ಟು ಎಷ್ಟು ಪ್ರಭಾರ ಪಶುವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; ಒಟ್ಟು ಮಂಜೂರಾದ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳು ಎಷ್ಟು;

(ಈ) ಯಾವ ಯಾವ ಆಸ್ಪತ್ರೆಗಳು ಸ್ವಂತ ಕಟ್ಟಡ ಹೊಂದಿವೆ; ಯಾವ ಯಾವ ಆಸ್ಪತ್ರೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ; ಸ್ವಂತ ಕಟ್ಟಡದ ಆಸ್ಪತ್ರೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಆಸ್ಪತ್ರೆ

ಕಟ್ಟಡಗಳು ಎಷ್ಟು; ಬಾಡಿಗೆ ಕಟ್ಟಡದಲ್ಲಿರುವ ಆಸ್ಪತ್ರೆಗಳಿಗೆ ಯಾವ ಕಾಲಮಿತಿಯಲ್ಲಿ ಸ್ವಂತ ಕಟ್ಟಡ ಒದಗಿಸಲಾಗುವುದು ಶಿಥಿಲಗೊಂಡ ಕಟ್ಟಡಗಳನ್ನು ಯಾವ ಕಾಲಮಿತಿಯಲ್ಲಿ ದುರಸ್ಥಿಗೊಳಿಸಲಾಗುವುದು;

(ಉ) ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ಮತ್ತು ಮೂಲಭೂತ ಸೌಲಭ್ಯಗಳನ್ನು ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು?

## ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೭ (೨೫೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ರಾಜ್ಯದ ನಗರಸಭೆ, ಪಟ್ಟಣ ಪಂಚಾಯತಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹಾಗೂ ಪೌರ ಕಾರ್ಮಿಕರನ್ನು ಹಂತ ಹಂತವಾಗಿ ಭರ್ತಿ ಮಾಡುವುದಾಗಿ ಭರವಸೆ ನೀಡಿದ್ದು, ಈವರೆಗೂ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಗ್ರಾಮ ಪಂಚಾಯತಿಗಳು, ಪುರಸಭೆಗಳಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಸ್ಥಳೀಯ ಸಂಸ್ಥೆಗಳು, ಮೂಲಭೂತ ಸೌಕರ್ಯಗಳ ಕೊರತೆಯಿಂದ, ಸಿಬ್ಬಂದಿಗಳ ಕೊರತೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರವು ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು; ಆರ್ಥಿಕ ಇಲಾಖೆ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದೆ; ಈ ಪ್ರಕ್ರಿಯೆ ಇಷ್ಟು ವಿಳಂಬವಾಗಲು ಕಾರಣಗಳೇನು;

(ಈ) ರಾಜ್ಯದಲ್ಲಿರುವ ಒಟ್ಟು ಪಟ್ಟಣ ಪಂಚಾಯಿತಿ, ಪುರಸಭೆಗಳಲ್ಲಿ ಮುಖ್ಯಾಧಿಕಾರಿ, ಆರೋಗ್ಯ ಅಧಿಕಾರಿ, ಇಂಜನೀಯರ್ ಮತ್ತು ಡಿ ವರ್ಗದ ಸಿಬ್ಬಂದಿಗಳ ಎಷ್ಟು ಹುದ್ದೆಗಳ ಖಾಲಿ ಇವೆ;

(ಉ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು?

## ಬೆಳಗಾವಿ ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಭೂಮಿ ಸವಳು– ಜವುಳಾಗಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೮ (೨೭೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಾಡಾ ವ್ಯಾಪ್ತಿಯ ಜಮೀನನ್ನು ಹೊರತುಪಡಿಸಿ, ಉಳಿದ ಸಾವಿರಾರು ಹೆಕ್ಟೇರ್ ಕೃಷಿ ಭೂಮಿಯು ಸವಳು–ಜವಳಾಗಿ, ಸತ್ವಹೀನವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರು ಕೃಷಿ ಭೂಮಿಯು ಸವಳು– ಜವಳಾಗಿ ಸತ್ವಹೀನವಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಸವಳು–ಜವಳಾಗಿರುವ ಕೃಷಿ ಭೂಮಿಯ ಬಗ್ಗೆ ಕೃಷಿ ಇಲಾಖೆಯ ವತಿಯಿಂದ ಸಮೀಕ್ಷೆ ನಡೆಸಲಾಗಿದೆಯೇ;

(ಈ) ಸವಳು–ಜವಳಾಗಿರುವ ಜಮೀನನ್ನು ಅಭಿವೃದ್ಧಿಪಡಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆಯೇ; ಪ್ರಸ್ತಾವನೆ ಸಿದ್ದಪಡಿಸಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ಮೊತ್ತ ಎಷ್ಟು;

(ಉ) ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಮಂಜೂರಾತಿ ನೀಡುವ ಕುರಿತು ಸರ್ಕಾರವು ಏನು ಕ್ರಮ ಕೈಗೊಂಡಿದೆ;

(ಊ) ಸವಳು–ಜವಳಾದ ಕೃಷಿ ಭೂಮಿಯನ್ನು ಯಾವ ಕಾಲಮಿತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು?

## ನೂತನವಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಒದಗಿಸದೇ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೯ (೨೫೧) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೂತನವಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಪಟ್ಟಣ ಪಂಚಾಯಿತಿಗಳಿಗೆ ದೈನಂದಿನ ಕಾರ್ಯನಿರ್ವಹಿಸಲು ಅಗತ್ಯ ಅನುದಾನ ಒದಗಿಸದೇ ಇರುವುದರಿಂದ ಹಾಗೂ ಸಿಬ್ಬಂದಿಯ ಕೊರತೆಯಿಂದ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನು ಮೇಲ್ದರ್ಜೆಗೇರಿಸಿದ ಮೇಲೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; (ಪಟ್ಟಣ ಪಂಚಾಯತಿವಾರು, ವರ್ಷಾವಾರು ವಿವರ ನೀಡುವುದು;

(ಇ) ಬೆಳಗಾವಿ ಜಿಲ್ಲೆಯಲ್ಲಿ ನೂತನ ಪಟ್ಟಣ ಪಂಚಾಯತಿಗಳಿಗೆ ಅವಶ್ಯವಿರುವ ಸಿಬ್ಬಂದಿಯನ್ನು ಒದಗಿಸಲಾಗಿದೆಯೇ; ಒದಗಿಸಿರುವ ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ ಪಟ್ಟಣ ಪಂಚಾಯತಿವಾರು ವಿವರ ನೀಡುವುದು; ಖಾಲಿ ಇರುವ ಹುದ್ದೆಗಳಿಗೆ ಯಾವ ಕಾಲಮಿತಿಯಲ್ಲಿ ನೇಮಕಾತಿಗಳನ್ನು ಮಾಡಲಾಗುವುದು;

(ಈ) ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಪೂರ್ಣ ಪ್ರಮಾಣದ ವೇತನ ನೀಡಲಾಗುತ್ತಿದೆಯೇ; ವೇತನ ನೀಡುವಲ್ಲಿ ವಿಳಂಬವಾಗಿದ್ದರೆ, ಅದಕ್ಕೆ ಕಾರಣಗಳೇನು;

(ಉ) ಬಾಕಿ ನಿಂತಿರುವ ವೇತನವನ್ನು ಹಾಗೂ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡುವಿರಿ?

## ರಾಜ್ಯದಲ್ಲಿ, ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಬಿಡುಗಡೆ ಮಾಡುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೩೦ (೨೫೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೈನುಗಾರಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಜಾರಿಗೆ ತಂದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹಧನ ನಿಗಧಿತ ಅವಧಿಯಲ್ಲಿ ರೈತರಿಗೆ ಮುಟ್ಟದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರವು ಪ್ರತಿ ಲೀಟರ್ ಹಾಲಿಗೆ ನೀಡುವ ಪ್ರೋತ್ಸಾಹಧನವೆಷ್ಟು; ಈಗಾಗಲೇ ರೈತರಿಗೆ ಯಾವ ತಿಂಗಳ ಅಂತ್ಯದವರೆಗೆ ಪ್ರೋತ್ಸಾಹಧನ ಬಿಡುಗಡೆ ಮಾಡಿದೆ;

(ಇ) ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡದೇ ಬಾಕಿ ಇರುವ ಪ್ರೋತ್ಸಾಹಧನ ಎಷ್ಟು;

(ಈ) ಪ್ರೋತ್ಸಾಹಧನ ಬಿಡುಗಡೆ ಮಾಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

(ಉ) ಪ್ರೋತ್ಸಾಹಧನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡುವುದು?

## ನೇಕಾರರಿಗೆ ವಿದ್ಯುಚ್ಛಕ್ತಿಯಿಲ್ಲದೆ ತೊಂದರೆಯಾಗಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೩೧ (೨೩೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಇತ್ತೀಚೆಗೆ ಬರ ಪರಿಸ್ಥಿತಿಯಿಂದಾಗಿ ವಿದ್ಯುಚ್ಛಕ್ತಿ, ಸರಬರಾಜು ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;

(ಆ) ಅನೇಕ ಜಿಲ್ಲೆಯ, ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೇಕಾರಿಕೆ ಉದ್ಯಮ ಮಾಡುತ್ತಿರುವ ನೇಕಾರರಿಗೆ ವಿದ್ಯುಚ್ಛಕ್ತಿ ತೊಂದರೆಯಿಂದ ನೇಕಾರಿಕೆ ನಿಲ್ಲಿಸಿರುವುದು ಸರ್ಕಾರ ಗಮನಿಸಿದೆಯೇ;

(ಇ) ಹಾಗಿದ್ದಲ್ಲಿ, ಬಡ ನೇಕಾರರಿಗೆ ಆಶ್ರಯ ನೀಡುತ್ತಿರುವ ಸರ್ಕಾರ ವಿಶೇಷ ವ್ಯವಸ್ಥೆ ಮೂಲಕ ವಿದ್ಯುಚ್ಛಕ್ತಿ ಒದಗಿಸುವುದೇ;

(ಈ) ನೇಕಾರಿಕೆ ಮಾಡುತ್ತಿರುವ ನೇಕಾರರಿಗೆ ಪ್ರತ್ಯೇಕ ವಿದ್ಯುತ್ ಸಂಪರ್ಕ ಒದಗಿಸಲು ಸಾಧ್ಯವಾಗುವುದೇ?

## ತುರುವೇಕೆರೆ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳ ದುರಸ್ಥಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೩೨ (೨೩೩) ಮಾನ್ಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುರುವೇಕೆರೆ ಕ್ಷೇತ್ರದಲ್ಲಿರುವ ಲೋಕೋಪಯೋಗಿ ರಸ್ತೆಗಳಾವುವು;

(ಆ) ಅನೇಕ ವರ್ಷಗಳಿಂದ ಡಾಂಬರೀಕರಣ ಹಾಳಾಗಿದ್ದರು ಆ ರಸ್ತೆಗಳನ್ನು ಮರುಡಾಂಬರೀಕರಣ ಮಾಡಲು ಸರ್ಕಾರ ಹಿಂದೇಟುಹಾಕಲು ಕಾರಣವೇನು;

(ಇ) ಹಾಳಾಗಿರುವ ರಸ್ತೆಗಳನ್ನು ಗುರುತಿಸಿ ಮರು ಡಾಂಬರೀಕರಣ ಮಾಡಲು ಅನೇಕ ಪತ್ರ ನೀಡಿದ್ದರೂ ಇರುವರೆಗೆ ಮಂಜೂರು ಮಾಡದಿರಲು ಕಾರಣವೇನು;

(ಈ) ಕೂಡಲೇ ಕ್ರಮ ಕೈಗೊಂಡು ಮರು ಡಾಂಬರೀಕರಣ ಮಾಡಲು ಹಣ ಬಿಡುಗಡೆ ಮಾಡಲಾಗುವುದೇ;

(ಉ) ಯಾವಾಗ ಹಣ ಬಿಡುಗಡೆ ಮಾಡಿ ರಸ್ತೆಗಳನ್ನು ದುರಸ್ಥಿ ಮಾಡಲಾಗುವುದು?

## ರಾಜ್ಯದ ಬಡ ನೇಕಾರರ ಸಾಲ ಮನ್ನಾ ಮಾಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೩೩ (೨೩೧) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ನೇಕಾರಿಕೆ ಮಾಡಿ ಬದುಕುತ್ತಿರುವ ಬಡ ನೇಕಾರರು ತಯಾರು ಮಾಡಿರುವ ಬಟ್ಟೆ ಮಾರ್ಕೆಟ್ ಇಲ್ಲದೆ ಸಾಲ ತೀರಿಸಲಾಗಿದೇ ವಲಸೆ ಹೋಗುತ್ತಿರುವುದು ಸರ್ಕಾರ ಗಮನಿಸಿದೆಯೇ;

(ಆ) ರೈತರ ಸಾಲ ಮನ್ನಾ ಮಾಡಲು ಹೊಂದಿರುವ ಸರ್ಕಾರ ಬಡ ನೇಕಾರರ ಸಾಲವನ್ನು ಮನ್ನಾ ಮಾಡಲು ಯೋಚಿಸಿದೆಯೇ;

(ಇ) ಹಲವಾರು ವರ್ಷಗಳಿಂದ ನೇಕಾರಿಕೆ ಮಾಡಿ ಬದುಕುತ್ತಿರುವ ಬಡ ನೇಕಾರರಿಗೆ ಸರ್ಕಾರ ಸಂಪೂರ್ಣ ಸಾಲ ಮನ್ನಾ ಮಾಡಿ ಅನುಕೂಲ ಮಾಡಿಕೊಡಲಾಗುವುದೇ;

(ಈ) ಯಾವಾಗ ಸಾಲ ಮನ್ನಾ ಮಾಡಲಾಗುವುದು?

# ತುರುವೇಕೆರೆ ನಗರದಲ್ಲಿ ಕಾಂಪ್ಲೆಕ್ಸ್ ಕಟ್ಟಡ ಕಾಮಗಾರಿ ನಿಂತಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೩೪ (೨೩೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುರುವೇಕೆರೆ ನಗರದಲ್ಲಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡುತ್ತಿರುವ ಕಾಂಪ್ಲೆಕ್ಸ್ ಕಟ್ಟಡಕ್ಕೆ ಸರ್ಕಾರ ಯಾವಾಗ ಮಂಜೂರು ಮಾಡಲಾಗಿತ್ತು;

(ಆ) ಕಾಮಗಾರಿ ಟೆಂಡರ್ ಆದ ದಿನಾಂಕ ಯಾವುದು; Agency ಯಾವುದು;

(ಇ) ಇದುವರೆಗೆ ಆಗಿರುವ ಕಾಮಗಾರಿ ವಿವರ ನೀಡುವುದು;

(ಈ) ಕಾಮಗಾರಿ ಮುಗಿಯಲು ನಿಗಧಿ ಮಾಡಿದ ದಿನಾಂಕ ಯಾವುದು;

(ಉ) ನಿಗಧಿತ ಅವಧಿಯೊಳಗೆ ಕಾಮಗಾರಿ ಮುಗಿಯದಿರಲು ಕಾರಣಗಳೇನು;

(ಊ) ಹಲವಾರು ವರ್ಷಗಳಿಂದ ಕಾಮಗಾರಿ ಕೆಲಸ ಮಾಡದೇ ಅಕ್ರಮ ಮಾಡಿರುವವರ ಮೇಲೆ ತೆಗೆದುಕೊಂಡ ಕ್ರಮಗಳೇನು; ಯಾವಾಗ ಕಾಮಗಾರಿ ಮುಗಿಯುವುದು? (ಪೂರ್ಣ ವಿವರಗಳನ್ನು ಒದಗಿಸುವುದು)

## ಬರಗಾಲದಿಂದ ಬೆಳೆ ನಾಶ ರೈತರಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೧೩೫ (೨೩೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಮಳೆ ಬಾರದೆ ಹಿಂಗಾರು ಕೃಷಿ ಬೆಳೆಗಳು ಒಣಗಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಪ್ರತಿ ವರ್ಷದ ವಾಡಿಕೆ ಮಳೆಗಿಂತ ಕಡಿಮೆ ಮಳೆ ಬಂದಿದ್ದು ಎಲ್ಲಾ ಬೆಳೆಗಳು ಒಣಗಿರುವ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೇ;

(ಇ) ಹಾಗಿದ್ದಲ್ಲಿ, ರೈತರಿಗೆ ಪ್ರತಿ ಎಕರೆಗೆ ಎಷ್ಟು ಪರಿಹಾರ ಘೋಷಣೆ ಮಾಡಲಾಗಿದೆ; ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು;

(ಈ) ರೈತರು ಪರಿಹಾರ ಪಡೆದುಕೊಳ್ಳಲು ಯಾವ ಮಾನದಂಡ ಅನುಸರಿಸಬೇಕು;

(ಉ) ಪರಿಹಾರ ಪಡೆಯಲು ಕಛೇರಿಗೆ ಅಲೆಯಬೇಕಾದ ಪರಿಸ್ಥಿತಿ ಇದೆಯೇ?

## ಪ್ರಿಯದರ್ಶಿನಿ ಯೋಜನೆಯಡಿ ಮಹಿಳಾ ಸದಸ್ಯರು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೬ (೧೧೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಿಯದರ್ಶಿನಿ ಯೋಜನೆಯಡಿ ಈವರೆಗೆ ಎಷ್ಟು ಮಹಿಳೆಯರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರ ಅನುದಾನ ನೀಡಿದೆ;

(ಆ) ಮಾಹಿತಿ ಕೊರತೆಯಿಂದ ಮಹಿಳೆಯರು ಸಹಕಾರ ಚಳವಳಿಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗದೆ, ಸರ್ಕಾರದ ಪ್ರಿಯದರ್ಶಿನಿ ಯೋಜನೆಯ ಲಾಭವನ್ನು ಪಡೆಯಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

## ರೈತರಿಗೆ ತೋಟಗಾರಿಕಾ ಇಲಾಖೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೭ (೧೮೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಗೆ ವಿವಿಧ ಯೋಜನೆಗಳ ಆಯ್ಕೆ ಕೋರಿ ಬಂದ ಫಲಾನುಭವಿಗಳ ಸಂಖ್ಯೆ ಎಷ್ಟು; (ಯೋಜನಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ಇಲಾಖಾ ನಿಗಧಿತ ಅನುದಾನಕ್ಕಿಂತ ಹೆಚ್ಚುವರಿ ಅರ್ಜಿ ಸಲ್ಲಿಕೆಯಾದ ಯೋಜನೆಯ ಆಯ್ಕೆಯಲ್ಲಿ ಇಲಾಖೆಯು ಲಾಟರಿ ಮೂಲಕ ಕಾರ್ಯವೆಸಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದರ ಪಾರದರ್ಶಕತೆಗೆ ಜನಪ್ರತಿನಿಧಿಯನ್ನು ಒಳಗೊಂಡ ಸಮಿತಿಯನ್ನು ನೇಮಿಸಲಾಗಿದೆಯೇ; ಇಲ್ಲವಾದ್ದಲ್ಲಿ ಅಧಿಕಾರಿಗಳ ಸ್ವೇಚ್ಛಾಚಾರಕ್ಕೆ ಎಡೆಮಾಡಿಕೊಡುವುದರಿಂದ ಈ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆ ಹೊಂದಿರುವ ಒಟ್ಟು ಭೂಪ್ರದೇಶವೆಷ್ಟು; ಅದರಲ್ಲಿ ಇಲಾಖೆ ಸದ್ಬಳಕೆಯಾದ ಭೂಮಿಯೆಷ್ಟು? (ತಾಲ್ಲೂಕುವಾರು ವಿವರ ನೀಡುವುದು?

## ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದ ಮನೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೮ (೧೮೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ವಾಸ್ತವ್ಯದ ಮನೆಗಳ ಸಂಖ್ಯೆ ಎಷ್ಟು; (ಗ್ರಾಮ ಪಂಚಾಯತಿವಾರು ವಿವರ ನೀಡುವುದು)

(ಆ) ದೀನ ದಯಾಳ ಉಪಾಧ್ಯಾಯ ಯೋಜನೆಯ ಮಾನದಂಡ ಯಾವುದು ಮತ್ತು ಈ ಯೋಜನೆಯ ಅನ್ವಯ ವಿದ್ಯುತ್ ರಹಿತ ಮನೆಗಳಿಗೆ ಸಂಪರ್ಕ ಕಲ್ಪಿಸಲು ನಿಗಧಿಪಡಿಸಲಾದ ಕಾಲಮಿತಿ ಎಷ್ಟು;

(ಇ) ಸಾರ್ವಜನಿಕ ರಸ್ತೆಯ ಗಡಿ ಅಂಚಿನಲ್ಲಿ ಅನಧಿಕೃತ ಅಂಗಡಿಗಳಿಗೆ ಗ್ರಾಮ ಪಂಚಾಯತಿಯಿಂದ ನಿರಾಕ್ಷೇಪಣಾ ಪತ್ರ ನೀಡುತ್ತಿರುವಾಗ ಹಲವಾರು ವರ್ಷಗಳಿಂದ ವಾಸ್ತವ್ಯವಿರುವ ಮನೆಗಳಿಗೆ ನಿರಾಕ್ಷೇಪಣಾ ಪತ್ರ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಕೈಗೊಳ್ಳಲಾದ ಕ್ರಮವೇನು?

## ಟೋಲ್ ಸಂಗ್ರಾಹಕ ಕೇಂದ್ರದಲ್ಲಿ ಸಿಬ್ಬಂದಿಗಳ ನಿಯಂತ್ರಣ ಮತ್ತು ಅಂತರ್‌ಜಿಲ್ಲಾ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೯ (೧೮೫) ಮಾನ್ಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಅಂತರ್‌ಜಿಲ್ಲಾ ರಸ್ತೆಗಳನ್ನು ಕೂಡುವ ಬಾಳೆಬರೆ, ಆಗುಂಬೆ, ಶಿರಾಡಿ, ಚಾರ್ಮುಡಿ ನಾಗೋಡಿ ಸಂಪಾಜೆ ಘಾಟ್ ಭಾಗದಲ್ಲಿ ದೈನಂದಿನ ವಾಹನ ಸಂಚಾರದ ಪ್ರಮಾಣವೆಷ್ಟು; ವಾಹನ ದಟ್ಟಣೆಯನ್ನು ಪರಿಗಣಿಸಿ ಈ ರಸ್ತೆಗಳನ್ನು ಉನ್ನತ್ತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಉಡುಪಿ ಜಿಲ್ಲೆಯ ಕೋಟೇಶ್ವರ ಹಾಲಾಡಿ ಸೋಮೇಶ್ವರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ;

(ಇ) ರಾಜ್ಯದ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಿಸುವ ಕೇಂದ್ರಗಳಲ್ಲಿ ಟೋಲ್ ನಿರ್ಧರಣೆಗೆ ಇರುವ ಮಾನದಂಡ ಯಾವುದು; (ಈ ಬಗ್ಗೆ ಆದೇಶ ಪ್ರತಿ ಒದಗಿಸುವುದು) ಟೋಲ್ ಸಂಗ್ರಹಣೆ ಕೇಂದ್ರದಲ್ಲಿ ಸಿಬ್ಬಂದಿಗಳ ನಡವಳಿಕೆಯ ಸುಧಾರಣೆಗಾಗಿ ಸಿಬ್ಬಂದಿಗಳ ಮಾಹಿತಿ ಮತ್ತು ಗುರುತಿನ ಚೀಟಿಯನ್ನು ಇಲಾಖೆಯು ಹೊಂದಿದೆಯೇ; ಇಲ್ಲವಾದಲ್ಲಿ ಕಾರಣವೇನು?

## ನೂತನವಾಗಿ ಹಾಲು ಉತ್ಪಾದಕರ ಸಹಕಾರ ಸಂಘ ಪ್ರಾರಂಭಿಸುವ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦ (೧೮೩) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೂತನವಾಗಿ ಹಾಲು ಉತ್ಪಾದಕರ ಸಹಕಾರ ಸಂಘ ಪ್ರಾರಂಭಿಸಲು ಇಲಾಖೆಯ ಹಾಗೂ ಹಾಲು ಉತ್ಪಾದಕರ ಒಕ್ಕೂಟದ ಮಾನದಂಡಗಳು ಯಾವುವು; (ಮಾರ್ಗಸೂಚಿ ಸುತ್ತೋಲೆ ಪ್ರತಿ ಒದಗಿಸುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೂತನವಾಗಿ ಹಾಲು ಉತ್ಪಾದಕರ ಸಹಾಕಾರ ಸಂಘ ಪ್ರಾರಂಭಿಸಲು ಹಾಲು ಒಕ್ಕೂಟದ ಶಿಫಾರಸ್ಸಿಗಾಗಿ ಕೋರಿ ಬಂದ ಪ್ರಸ್ತಾವನೆಗಳು ಎಷ್ಟು; ಹಾಗೂ ಹಾಲು ಒಕ್ಕೂಟದಿಂದ ತಿರಸ್ಕೃತವಾದ ಪ್ರಸ್ತಾವನೆಗಳು ಎಷ್ಟು; ತಿರಸ್ಕರಿಸಲು ಕಾರಣವೇನು; (ತಾಲ್ಲೂಕುವಾರು, ಸಂಘವಾರು ವಿವರ ನೀಡುವುದು)

(ಇ) ಹಾಲು ಒಕ್ಕೂಟವು ಸ್ವೇಚ್ಛಾಚಾರ ಹಾಗೂ ಸ್ವ ಹಿತಾಸಕ್ತಿ ಅನುಗುಣವಾಗಿ ಸಾಮಾಜಿಕ ನ್ಯಾಯಕ್ಕೆ ವ್ಯತಿ ರಿಕ್ತವಾಗಿ ನಿರ್ಣಯ ಕೈಗೊಂಡಿದ್ದಲ್ಲಿ ಈ ಬಗ್ಗೆ ಇಲಾಖೆಯ ಕಾನೂನು ಕ್ರಮವೇನು;

(ಈ) ಹಾಲು ಉತ್ಪಾದಕರ ಸಹಕಾರ ಸಂಘಗಳು ಒಕ್ಕೂಟದ ಸಹಕಾರದೊಂದಿಗೆ ಸ್ಥಾಪಿತವಾದಲ್ಲಿ ಸದರಿ ಸಂಘಗಳಿಗೆ ದೊರೆಯುವ ವಿಶೇಷ ಸವಲತ್ತುಗಳು ಯಾವುವು?

## ಮೂಡಿಗೆರೆ, ಭೈರಾಪುರ, ಶಿಶಿಲಾ ರಸ್ತೆ ಅಭಿವೃದ್ಧಿ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧ (೨೧೫) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೂಡಿಗೆರೆ, ಭೈರಾಪುರ, ಶಿಶಿಲಾ ರಸ್ತೆ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

(ಆ) ಹಾಗಿದ್ದಲ್ಲಿ, ಸದರಿ ರಸ್ತೆ ಅಭಿವೃದ್ಧಿಯಾಗುವುದರಿಂದ ಶ್ರೀಕ್ಷೇತ್ರವಾದ ಧರ್ಮಸ್ಥಳಕ್ಕೆ ಮತ್ತು ಶ್ರೀಕ್ಷೇತ್ರ ಕುಕ್ಕೆ ಸುಬ್ರಮಣ್ಯಕ್ಕೆ ಪುತ್ತೂರು, ಸುಳ್ಯಾ ಮಾರ್ಗವಾಗಿ ಹೋಗುವ ಭಕ್ತಾಧಿಗಳಿಗೆ ೧೫ ಕಿ.ಮೀ. ಉಳಿತಾಯವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ಕಾಮಗಾರಿಯುನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ರಸ್ತೆ ಅಭಿವೃದ್ಧಿಪಡಿಸಲು ಅಂದಾಜು ಎಷ್ಟು ವೆಚ್ಚವಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಪಶುಭಾಗ್ಯ ಯೋಜನೆ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨ (೨೧೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮೃತಪಡುತ್ತಿರುವ ರೈತನ ಕುಟುಂಬಕ್ಕೆ ಸ್ವಾವಲಂಬಿ ಜೀವನ ನಡೆಸಲು "ಪಶು ಭಾಗ್ಯ" ಯೋಜನೆಯನ್ನು ಜಾರಿಗೆ ತರುವುದಾಗಿ ಘೋಷಿಸಿದ್ದು, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ಮೃತ ರೈತ ಕುಟುಂಬಕ್ಕೆ ಸ್ವಾವಲಂಬಿ ಜೀವನ ಸಾಗಿಸಲು ಈ ಯೋಜನೆಯಲ್ಲಿ ಏನೆಲ್ಲಾ ಅನುಕೂಲಗಳನ್ನು ಒದಗಿಸಲಾಗುತ್ತದೆ;

(ಇ) ಸದರಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಚಿಕ್ಕಮಗಳೂರು ಜಿಲ್ಲೆಗೆ ಈ ಯೋಜನೆಯಡಿ ಎಷ್ಟು ಅನುದಾನ ಮೀಸಲಿಡಲಾಗಿದೆ; ನಕ್ಸಲ್ ಪೀಡಿತ ಪ್ರದೇಶದವರಿಗೆ ವಿಶೇಷ ಯೋಜನೆಯನ್ನು ಜಾರಿಗೆ ತರುವ ವಿಚಾರ ಸರ್ಕಾರದ ಮುಂದೆ ಇದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

## ಸಿ.ಎ. ಸೈಟ್‌ಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩ (೨೭೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆವಾರು ಖಾಲಿ ಸಿ.ಎ. ಸೈಟ್‌ಗಳ ಲೇಔಟ್‌ವಾರು ವಿವರ ನೀಡುವುದು;

(ಆ) ಯಾವ ಉದ್ದೇಶಕ್ಕಾಗಿ ಇವುಗಳನ್ನು ಇದುವರೆಗೆ ಹಂಚಿಕೆ ಮಾಡದೆ ಕಾಯ್ದಿರಿಸಲಾಗಿದೆ; ಇದಕ್ಕೆ ಕಾರಣವೇನು; (ಸಂಪೂರ್ಣ ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ಗ್ರಾಮ ಪಂಚಾಯತಿವಾರು ಸಂಪೂರ್ಣ ವಿವರ ನೀಡುವುದು)

## ಹೈನುಗಾರಿಕೆ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪ (೨೭೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೈನುಗಾರಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಗ್ರಾಮ ಪಂಚಾಯಿತಿವಾರು ವಿವರ ನೀಡುವುದು)

(ಆ) ಹೈನುಗಾರಿಕೆಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಹಾಲಿನ ಪ್ರಮಾಣವೆಷ್ಟು; ಹಾಲಿನ ಸರಬರಾಜಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಹೈನುಗಾರಿಕೆ ಪ್ರಾರಂಭಿಸಲು ಸರ್ಕಾರವು ನೀಡುತ್ತಿರುವ ಜಾತಿವಾರು ಪ್ರೋತ್ಸಾಹಧನವೆಷ್ಟು? (ಸಂಪೂರ್ಣ ವಿವರ ನೀಡುವುದು)

## ನಿರಂತರ ಜ್ಯೋತಿ ಯೋಜನೆಯ ಕಾಮಗಾರಿಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫ (೨೭೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡ ನಿರಂತರ ಜ್ಯೋತಿ ಯೋಜನೆಯ ಕಾಮಗಾರಿಗಳು ಯಾವುವು; ಪ್ರತಿ ಕಾಮಗಾರಿವಾರು, ಗ್ರಾಮ ಪಂಚಾಯಿತಿವಾರು ಹಾಗೂ ಫಲಾನುಭವಿಗಳವಾರು ಸಂಪೂರ್ಣ ವಿವರ ನೀಡುವುದು;

(ಆ) ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ಈ ಮೂರು ಜಿಲ್ಲೆಗಳಲ್ಲಿ ಎಷ್ಟು ಫೆಡರ್‌ಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)

## ಹೆಸ್ಕಾಂ ಸಂಸ್ಥೆಯು ಖರೀದಿ ಮಾಡಿರುವ ವಿದ್ಯುತ್ ಪ್ರಮಾಣದ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬ (೨೭೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಸ್ಕಾಂ ಸಂಸ್ಥೆಯು ಯಾವ ಯಾವ ಸೌರ ವಿದ್ಯುತ್ ಶಕ್ತಿ ಘಟಕಗಳಿಂದ ವಿದ್ಯುತ್ ಖರೀದಿಸಿದೆ; (ಗ್ರಾಮ ಪಂಚಾಯಿತಿವಾರು, ವಿದ್ಯುತ್ ಪ್ರಮಾಣವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಸೌರ ವಿದ್ಯುತ್ ಘಟಕಗಳಿಂದ ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ನಿಗಧಿಪಡಿಸಿದ ದರ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಘಟಕಗಳಿಂದ ವಿದ್ಯುತ್ ಖರೀದಿಗಾಗಿ ಆಗಿರುವ ಒಪ್ಪಂದಕ್ಕಿಂತ ಹೆಚ್ಚಿಗೆ ಹಣ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಹೆಚ್ಚುವರಿ ಪಾವತಿಸಲಾದ ಮೊತ್ತ ಎಷ್ಟು; ಹೆಚ್ಚುವರಿ ಪಾವತಿಸಲಾದ ಮೊತ್ತವನ್ನು ಮರು ಪಾವತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

## ಪಶುಪಾಲನಾ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ಸಮರ್ಪಕ ಮಾಸಿಕ ವೇತನ ನೀಡದಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೭ (೨೮೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪಶುಪಾಲನಾ ಇಲಾಖೆಯ ಅಧಿಕಾರಿಗಳು, ಪರಿವೀಕ್ಷಕರು, ಸಹಾಯಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಜುಲೈ, ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್, ೨೦೧೬ರ ವೇತನಗಳನ್ನು ಯಾವ ತಿಂಗಳಿನಲ್ಲಿ ನೀಡಲಾಯಿತು;

(ಆ) ಮಾಸಿಕ ವೇತನ ನೀಡುವಿಕೆಯಲ್ಲಿ ವಿಳಂಬವಾಗಿರುವುದು ನಿಜವೇ ಇದಕ್ಕೆ ಕಾರಣಗಳೇನು?

## ಚನ್ನರಾಯಪಟ್ಟಣ–ಅರಸೀಕೆರೆ ರಸ್ತೆ ಹದೆಗೆಟ್ಟಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೮ (೨೨೩) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚನ್ನರಾಯಪಟ್ಟಣದಿಂದ ಅರಸೀಕೆರೆಗೆ ಹೋಗುವ ರಸ್ತೆಯು ತೀರ ಹದೆಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ರಸ್ತೆಯನ್ನು ಯಾವಾಗ ಅಭಿವೃದ್ಧಿಪಡಿಸಲಾಗಿತ್ತು; ಸದರಿ ರಸ್ತೆಯ ಅಭಿವೃದ್ಧಿಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಇ) ಸದರಿ ರಸ್ತೆಯ ಪೂರ್ತಿ ಅಭಿವೃದ್ಧಿ ಮಾಡು ಮೊದಲು, ತುರ್ತಾಗಿ ರಸ್ತೆಯ ಗುಂಡಿಗಳನ್ನು ಮುಚ್ಚುವುದು ಮತ್ತು ರಸ್ತೆ ಕಿತ್ತುಹೋದ ಕಡೆಗಳಲ್ಲಿ ತೇಪೆ ಹಾಕುವ ಕೆಲಸವನ್ನು ಮಾಡಿಸಲು ಸರ್ಕಾರವು ಮುಂದಾಗುವುದೇ?

## ಉತ್ತರ ಕರ್ನಾಟಕ ಜಿಲ್ಲೆಗಳ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿಗಳು ಹದೆಗೆಟ್ಟಿದ್ದು, ದುರಸ್ಥಿ ಮಾಡಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೯ (೨೨೫) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದ ಜಿಲ್ಲೆಗಳ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿಗಳು ಯಾವುವು;

(ಆ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಹಲವು ರಾಜ್ಯ ಹೆದ್ದಾರಿಗಳು ದೊಡ್ಡ ದೊಡ್ಡ ಗುಂಡಿಗಳಿಂದ ಹದೆಗೆಟ್ಟಿದ್ದು, ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ಕುರಿತು ವಿವರ ನೀಡುವುದು?

## ಬೀದರ್ ಜಿಲ್ಲೆಯ ಎ.ಪಿ.ಎಂ.ಸಿ. ಗಳ ಅಭಿವೃದ್ಧಿ ಕುರಿತು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೦(೨೬೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಮತ್ತು ಎಲ್ಲಾ ತಾಲ್ಲೂಕಿನಲ್ಲಿರುವ ಎ.ಪಿ.ಎಂ.ಸಿ ಯ ಅಭಿವೃದ್ಧಿಗೆ ಒದಗಿಸಿರುವ ಅನುದಾನ ಎಷ್ಟು;

(ಆ) ಎ.ಪಿ.ಎಂ.ಸಿ. ಯಲ್ಲಿ ಒಟ್ಟು ಎಷ್ಟು ಮಳಿಗೆಗಳಿವೆ; ಆ ಪೈಕಿ ಖಾಲಿ ಇರುವ ಮಳಿಗೆಗಳ ಸಂಖ್ಯೆ ಎಷ್ಟು;

(ಇ) ಇನ್ನೂ ಹೆಚ್ಚಿನ ಮಳಿಗೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು;

(ಈ) ಸದರಿ ಮಳಿಗೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮ ಏನು? (ವಿವರ ನೀಡುವುದು)

## ಬೀದರ್ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೧ (೨೬೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್‌ನ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ; (ಪ್ರತ್ಯೇಕ ವಿವರ ನೀಡುವುದು)

(ಆ) ಸದರಿ ವಿಶ್ವವಿದ್ಯಾಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳಾವುವು ಕಾಮಗಾರಿ ಕೈಗೊಂಡಿದ್ದಲ್ಲಿ ಪ್ರತ್ಯೇಕ ಕಾಮಗಾರಿಗಳ ತಗಲುವ ವೆಚ್ಚ ಎಷ್ಟು; ಕಾಮಗಾರಿ ಪೂರ್ಣಗೊಂಡಿದ್ದಲ್ಲಿ ನಿರ್ವಹಿಸಿದ ಗುತ್ತಿಗೆದಾರರ ಮಾಹಿತಿ ನೀಡುವುದು;

(ಇ) ಸದರಿ ವಿಶ್ವವಿದ್ಯಾಲಯ ಬಿಡುಗಡೆಯಾದ ಅನುದಾನದಲ್ಲಿ ಇದುವರೆಗೆ ಉಳಿದ ಅನುದಾನ ಎಷ್ಟು; ಬಾಕಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)

## ರೈತರಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೨ (೨೬೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿ–ಅನಾವೃಷ್ಟಿ ಹಾಗೂ ರೋಗಭಾದೆಯಿಂದ ಮತ್ತು ಅತಿಯಾದ ಮಳೆಯಿಂದ ವಿವಿಧ ಜಿಲ್ಲೆಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ೨–೩ ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿದ್ದ ರೈತರಿಗೆ ಪ್ರೋತ್ಸಾಹಧನ ನೀಡುವುದು ಹಾಗೂ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿಲುವೇನು;

(ಈ) ರೈತರಿಗೆ ಸಾಲ ಮನ್ನಾ ಮಾಡಲು ಮತ್ತು ಪ್ರೋತ್ಸಾಹಧನ ನೀಡಿದ್ದಲ್ಲಿ ಎಷ್ಟು ಹಣವನ್ನು ಫಲಾನುಭವಿ ರೈತರಿಗೆ ನೀಡಬೇಕಾಗಿದೆ, ನೀಡಿದ್ದಲ್ಲಿ, ಆಯಾಯಾ ಫಲಾನುಭವಿಗಳ ರೈತರಿಗೆ ವರ್ಷವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು?

## ಕೃಷಿ ಇಲಾಖೆಯಿಂದ ನೀಡಿರುವ ಯಂತ್ರೋಪಕರಣಗಳ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೩ (೨೮೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕೃಷಿನಿರತ ರೈತರಿಗೆ ಕಳೆದ ಮೂರು ವರ್ಷಗಳಲ್ಲಿ ಕೃಷಿ ಇಲಾಖೆಯಿಂದ ಒದಗಿಸಲಾಗುತ್ತಿರುವ ಕೃಷಿ ಪರಿಕರಗಳು, ಆಧುನಿಕ ಯಂತ್ರೋಪಕರಣಗಳ ಉಪಯೋಗ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ಇನ್ನಿತರೆ ಸೌಲಭ್ಯಗಳೇನು; (ಜಿಲ್ಲಾವಾರು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಮೇಲ್ಕಂಡ ಸವಲತ್ತುಗಳನ್ನು ಪಡೆಯಲು ಇರುವ ನಿಯಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಎಷ್ಟು ಜನ ರೈತರು ಈ ಸವಲತ್ತುಗಳನ್ನು ಇದುವರೆಗೂ ಪಡೆದಿರುತ್ತಾರೆ? (ಕೃಷಿನಿರತ ರೈತರ ವಿಳಾಸ ಸಹಿತ ಜಿಲ್ಲಾವಾರು, ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಯ ಸ್ಥಳಿಯ ಸಂಸ್ಥೆಗಳಿಗೆ ಮಂಜೂರಾದ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೪ (೨೬೮) ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪-ರಿಂದ ೨೦೧೬-೧೭ನೇ ಸಾಲಿನವರೆಗೆ ಬೀದರ್ ಜಿಲ್ಲೆಯಲ್ಲಿ ಪೌರಾಡಳಿತ ಇಲಾಖೆಯಿಂದ ಎಸ್.ಸಿ.ಪಿ./ಎಸ್.ಟಿ.ಪಿ. ಯೋಜನೆಗಳು ಅಡಿಯಲ್ಲಿ ಇಲಾಖೆಗೆ ಮಂಜೂರಾದ ಬಿಡುಗಡೆಯಾದ ಖರ್ಚು ಮಾಡಲಾದ ಉಳಿತಾಯವಾಗಿರುವ ಮೊತ್ತ ಎಷ್ಟು; (ಸ್ಥಳೀಯ ಸಂಸ್ಥೆಗಳವಾರು ವರ್ಷವಾರು ಕಾಮಗಾರಿವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ನೀಡಲಾಗಿದೆಯೇ; ಅಥವಾ ನೇರವಾಗಿ ನೀಡಲಾಗಿದೆಯೇ; ಟೆಂಡರ್ ಮೂಲಕ ನೀಡಿದ್ದಲ್ಲಿ, ಪ್ರತ್ಯೇಕ ಕಾಮಗಾರಿಗಳಿಗೆ ಒಟ್ಟು ಎಷ್ಟು ಜನ ಗುತ್ತಿಗೆದಾರರು ಕಾಮಗಾರಿಗಳಿಗೆ ಕೊಟೇಶನ್ ಸಲ್ಲಿಸಿರುತ್ತಾರೆ? (ಸಂಪೂರ್ಣ ಕಾಮಗಾರಿವಾರು ವಿವರ ನೀಡುವುದು)

## ಕೃಷಿಹೊಂಡ ಕಾಮಗಾರಿಯ ಅನುಕೂಲ ಮತ್ತು ಅನಾನುಕೂಲ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) ಹಾಗೂ ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೫೫ (೧೮೬)(೧೮೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಿಂದ ಕೃಷಿಹೊಂಡ ಕಾರ್ಯಕ್ರಮದಿಂದ ಅನುಕೂಲ ಪಡೆದ ರೈತರ ಸಂಖ್ಯೆ ಎಷ್ಟು ಮತ್ತು ಕೃಷಿಹೊಂಡ ಕಾಮಗಾರಿಯ ವರ್ಷಾವಾರು ವಿಸ್ತೀರ್ಣದ ಮಾಹಿತಿ ನೀಡುವುದು;

(ಆ) ಕೃಷಿಹೊಂಡ ಕಾರ್ಯಕ್ರಮದಿಂದ ಇಳುವರಿ ಹೆಚ್ಚಾಗಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಬೆಳೆಯಲ್ಲಿ ಪ್ರಗತಿ ಸಾಧಿಸಲಾಗಿದೆ; (ಮಾಹಿತಿ ನೀಡುವುದು)

(ಇ) ಕೃಷಿಹೊಂಡ ಕಾಮಗಾರಿಯು ಅನುಕೂಲ ಮತ್ತು ಅನಾನುಕೂಲವನ್ನು ಯಾವ ಮಾನದಂಡದಲ್ಲಿ ಅಳೆಯಲಾಗುತ್ತಿದೆ;

(ಈ) ಕೃಷಿಹೊಂಡ ಕಾಮಗಾರಿಗಾಗಿ ಸರ್ಕಾರ ವರ್ಷವಾರು ನಿಗಧಿಪಡಿಸಿರುವ ಅನುದಾನವೆಷ್ಟು; ಸರ್ಕಾರ ಮಾಡಿದ ವೆಚ್ಚದ ವಿವರವನ್ನು ಜಿಲ್ಲಾವಾರು ಮಾಹಿತಿಯೊಂದಿಗೆ ನೀಡುವುದು;

(ಉ) ರಾಜ್ಯದ ಅಚ್ಚುಕಟ್ಟು ಪ್ರದೇಶಗಳಲ್ಲಿನ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡುವುದು ಅವಶ್ಯವಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಬಂದಿದ್ದರೆ, ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ರಾಜ್ಯ ಹೆದ್ದಾರಿಗಳ ದುರಸ್ಥಿ ಮತ್ತು ಟೋಲ್ ಸಂಗ್ರಹ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೬ (೧೯೦) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದೀಚೆಗೆ ರಾಜ್ಯದ ಎಷ್ಟು ಹೆದ್ದಾರಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ; ಈ ಯೋಜನೆಗೆ ಸರ್ಕಾರ ಮೀಸಲಿಟ್ಟಿದ್ದ ಅನುದಾನವೆಷ್ಟು; (ಬಳಕೆಯಾದ ಪ್ರಮಾಣ ಹಾಗೂ ಕೇಂದ್ರ ಸರ್ಕಾರದಿಂದ ಪಡೆದ ಅನುದಾನದ ವಿವರ ನೀಡುವುದು)

(ಆ) ರಾಜ್ಯದ ಎಷ್ಟು ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹವಾಗುತ್ತಿದೆ; ಪ್ರತಿ ಟೋಲ್‌ಗಳಲ್ಲಿ ದಿನವೊಂದಕ್ಕೆ ಸಂಗ್ರಹವಾಗುತ್ತಿರುವ ಮೊಬಲಗೆಷ್ಟು; (ಹೆದ್ದಾರಿ ಮತ್ತು ಟೋಲ್‌ಗೇಟ್‌ಗಳ ಹಾಗೂ ಟೋಲ್ ಸಂಗ್ರಹಿಸುತ್ತಿರುವ ಸಂಸ್ಥೆಯ ಹೆಸರಿನೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಲವಾರು ಟೋಲ್ ಸಂಗ್ರಹ ಸ್ಥಳಗಳಲ್ಲಿ ಗಂಟೆಗಟ್ಟಲೆ ಸಾರ್ವಜನಿಕರನ್ನು ಕಾಯಿಸಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

## ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಕಟ್ಟಡಗಳ ದುರಸ್ಥಿ ಕಾರ್ಯದ ಕುರಿತು

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೫೭ (೧೮೭) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿರುವ ಇಲಾಖಾವಾರು ಸರ್ಕಾರಿ ಕಟ್ಟಡಗಳೆಷ್ಟು; (ಕಟ್ಟಡಗಳ ಹೆಸರುಗಳೊಂದಿಗೆ ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಕಟ್ಟಡಗಳ ಬದಲಿಗೆ ಹೊಸ ಕಟ್ಟಡಗಳನ್ನು ಕಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊಸ ಸರ್ಕಾರಿ ಕಟ್ಟಡಗಳು ಮಂಜೂರಾಗಿವೆ; ಇಲ್ಲದಿದ್ದಲ್ಲಿ, ಹೊಸ ಸರ್ಕಾರಿ ಕಟ್ಟಡಗಳ ನಿರ್ಮಾಣ ಕೋರಿ ಎಷ್ಟು ಪ್ರಸ್ತಾವನೆಗಳು ಸರ್ಕಾರಕ್ಕೆ ಸಲ್ಲಿಕೆಯಾಗಿದೆ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಈ) ಈ ಸರ್ಕಾರಿ ಕಟ್ಟಡಗಳ ನಿರ್ವಹಣೆಗಾಗಿ ವಿವಿಧ ಲೆಕ್ಕಶೀರ್ಷಿಕೆ–ಯಡಿಯಲ್ಲಿ ಕಳೆದ ಮೂರು (೩) ವರ್ಷಗಳಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು? (ನಡೆಸಿದ ಕಾಮಗಾರಿಗಳ ಜೊತೆಗೆ ಪೂರ್ಣ ವಿವರ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಪ್ರತ್ಯೇಕ ಡಿ.ಸಿ.ಸಿ. ಬ್ಯಾಂಕ್ ಸ್ಥಾಪಿಸುವ ಬಗ್ಗೆ

**ಶ್ರೀ ಸೋಮಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೮ (೨೪೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಪ್ರತ್ಯೇಕ ಡಿ.ಸಿ.ಸಿ. ಬ್ಯಾಂಕ್ ಸ್ಥಾಪಿಸಲು ಅಲ್ಲಿನ ಜನರು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವಾಗ ಮತ್ತು ಎಲ್ಲಿ ಎಷ್ಟು ದಿವಸಗಳಲ್ಲಿ ಸ್ಥಾಪಿಸಲಾಗುವುದು; ಇದಕ್ಕೆ ಮೀಸಲಿಟ್ಟಿರುವ ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಬ್ಯಾಂಕ್ ಸ್ಥಾಪನೆ ಮಾಡದೆ ಇರುವುದಕ್ಕೆ ಕಾನೂನಾತ್ಮಕ ಹಾಗೂ ಆಡಳಿತಾತ್ಮಕವಾಗಿ ಸರ್ಕಾರಕ್ಕೆ ಏನಾದರೂ ತೊಂದರೆ ಇದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿ ನಾಲ್ಕು ವರ್ಗಗಳ ರೈತರ ಸಾಲದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೫೯ (೨೫೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ದೊಡ್ಡ ರೈತರು ಮಧ್ಯಮ ವರ್ಗದ ರೈತರು ಸಣ್ಣ ರೈತರು ಅತಿ ಸಣ್ಣ ರೈತರ ಕುಟುಂಬಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ರಾಜ್ಯದ ಈ ಮೇಲಿನ ನಾಲ್ಕು ತರಹದ ರೈತರು ಸಹಕಾರ ಸಂಘಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ೨೦೧೫–೧೬ರಲ್ಲಿ ಪಡೆದ ಸಾಲದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಹಾವೇರಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಈ ನಾಲ್ಕು ತರಹದ ರೈತ ವರ್ಗಗಳಲ್ಲಿ ಹತ್ತು ಸಾವಿರದಿಂದ ಮೂರು ಲಕ್ಷ ರೂಪಾಯಿಗಳ ತನಕ ೦% ಬಡ್ಡಿ ದರದಲ್ಲಿ ವಿತರಿಸಿದ ಸಾಲದ ಮೊತ್ತವೆಷ್ಟು; ರೂ. ೧೦ ಸಾವಿರದಿಂದ ೫೦ ಸಾವಿರದವರೆಗೆ ಮತ್ತು ೫೦ ಸಾವಿರದಿಂದ ರೂ. ೧ ಲಕ್ಷದವರೆಗೆ ೧ ಲಕ್ಷದಿಂದ ೨ ಲಕ್ಷದವರೆಗೆ

ಹಾಗೂ ೨ ಲಕ್ಷದಿಂದ ೩ ಲಕ್ಷದವರೆಗೆ ಸಾಲ ಪಡೆದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ರಾಜ್ಯದಲ್ಲಿ ಮಳೆಯಿಲ್ಲದೆ ಬರಗಾಲ ಬಂದಿರುವುದರಿಂದ, ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮವನ್ನು ಕೈಗೊಂಡಿದ್ದೀರಿ, ಮತ್ತು ರೈತರು ಪಡೆದ ಸಾಲವನ್ನು ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದರೆ, ಯಾವಾಗ ಮತ್ತು ಎಷ್ಟು ಮನ್ನಾ ಮಾಡಲಾಗುವುದು?

## ಹಾವೇರಿ ಜಿಲ್ಲೆಯ ತೋಟಗಾರಿಕೆ ಇಲಾಖೆಗೆ ಸೇರಿದ ಜಮೀನು ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೦ (೨೪೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಜಮೀನು ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇಲ್ಲಿ ಬೆಳೆಯಲಾಗುತ್ತಿರುವ ಬೆಳೆಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)

(ಇ) ತೋಟಗಾರಿಕೆ ಇಲಾಖೆಯಿಂದ ಹಾವೇರಿ ಜಿಲ್ಲಾ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಸದರಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಫಾರಂ ಹೌಸ್‌ಗಳಿವೆ; ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

## ಹಾವೇರಿ ಜಿಲ್ಲೆಯಲ್ಲಿ ಕೆ.ಎಂ.ಎಫ್ ಸ್ಥಾಪಿಸುವ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೧ (೨೪೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಪ್ರತ್ಯೇಕ ಕೆ.ಎಂ.ಎಫ್ ಸ್ಥಾಪಿಸಲು ಅಲ್ಲಿನ ಜನರು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವಾಗ ಮತ್ತು ಎಲ್ಲಿ, ಎಷ್ಟು ದಿವಸಗಳಲ್ಲಿ ಸ್ಥಾಪಿಸಲಾಗುವುದು; ಸಂಪೂರ್ಣ ಮಾಹಿತಿ ಒದಗಿಸುವುದು ಮತ್ತು ಇದಕ್ಕೆ ಮೀಸಲಿಟ್ಟ ಅನುದಾನವೆಷ್ಟು;

(ಇ) ಕೆ.ಎಂ.ಎಫ್ ಸ್ಥಾಪನೆಯಾಗದಿರುವುದಕ್ಕೆ ಕಾನೂನಾತ್ಮಕ ಹಾಗೂ ಆಡಳಿತಾತ್ಮಕವಾಗಿ ಸರ್ಕಾರಕ್ಕೆ ಏನಾದರೂ ತೊಂದರೆ ಇದೆಯೇ;? (ಸಂಪೂರ್ಣ ಮಾಹಿತಿ ಒದಗಿಸುವುದು)

## ಹಾವೇರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಯ SCP/TSP ಘಟಕಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೨ (೨೪೬) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ (SCP/TSP) ಎಸ್.ಸಿ.ಪಿ/ ಟಿ.ಎಸ್.ಪಿ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಮತ್ತು ಖರ್ಚಾಗಿರುವ ಹಣ ಎಷ್ಟು;

(ಆ) ಈ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಾವುವು;

(ಇ) ಹಾವೇರಿ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಇದರಿಂದ ಅನುಕೂಲವಾಗಿದೆ? (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

## ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡಗಳ ನಿರ್ಮಾಣ ಕಾರ್ಯ ಮತ್ತು ತಗುಲಿದ ವೆಚ್ಚ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೬೩ (೨೭೭) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡಗಳ ಶಂಕು ಸ್ಥಾಪನೆ ಮತ್ತು ಅವುಗಳ ಉದ್ಘಾಟನೆ ಯಾವ ಯಾವ ವರ್ಷದಲ್ಲಿ ಜರುಗಿದೆ; ಆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಮುಖ್ಯ ಮಂತ್ರಿಗಳು ಹಾಗೂ ಇತರೆ ನಾಯಕರುಗಳು ಯಾರು ಯಾರು; (ಪೂರ್ಣ ವಿವರ ನೀಡುವುದು)

(ಆ) ಸದರಿ ಎರಡೂ ಕಟ್ಟಡಗಳ ನಿರ್ಮಾಣ ಮಾಡಲು ತೆಗೆದುಕೊಂಡ ಅವಧಿ ಎಷ್ಟು; (ಮಾಹಿತಿ ನೀಡುವುದು)

(ಇ) ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡಗಳ ನಿರ್ಮಾಣಕ್ಕೆ ನಿಗಧಿ ಮಾಡಿದ್ದ ಅಂದಾಜು ವೆಚ್ಚ ಎಷ್ಟು; ಅಂತಿಮವಾಗಿ ಖರ್ಚು ಮಾಡಿದ ವೆಚ್ಚ ಎಷ್ಟು; (ಪೂರ್ಣ ವಿವರ ನೀಡುವುದು)

(ಈ) ಈ ಎರಡೂ ಕಟ್ಟಡಗಳ ವಿನ್ಯಾಸವನ್ನು ಮಾಡಿದವರು ಯಾರು; ಕಟ್ಟಡಗಳ ನಿರ್ಮಾಣ ಮಾಡಲು ಕಾರಣೀಕೃತಗಳಾದ ನಾಯಕರನ್ನು ಸದಾ ನೆನಪಿಸಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಸೌರ ಮತ್ತು ಪವನ ವಿದ್ಯುತ್ ಉತ್ಪಾದನಾ ಯಂತ್ರಗಳಿಂದ ವಿದ್ಯುತ್ ಉತ್ಪಾದನೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೬೪ (೨೭೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಪ್ರದೇಶದಲ್ಲಿ ಸೌರ ವಿದ್ಯುತ್ ಮತ್ತು ಪವನ ವಿದ್ಯುತ್ ಉತ್ಪಾದನಾ ಯಂತ್ರಗಳನ್ನು ಅಳವಡಿಸಿ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗುತ್ತಿದೆ; (ಜಿಲ್ಲಾವಾರು ತಾಲ್ಲೂಕುವಾರು ಮತ್ತು ಗ್ರಾಮವಾರು ವಿವರ ನೀಡುವುದು)

(ಆ) ಒಂದೊಂದು ಪವನ ಮತ್ತು ಸೌರ ವಿದ್ಯುತ್ ಉತ್ಪಾದನಾ ಯಂತ್ರಗಳನ್ನು ಅಳವಡಿಸಲು ಅಗತ್ಯವಾದ ಭೂಪ್ರದೇಶ ಎಷ್ಟು; ಪ್ರತಿ ಯಂತ್ರದ ಅಳವಡಿಕೆಗೆ ತಗಲುವ ವೆಚ್ಚ ಎಷ್ಟು;

(ಇ) ಈ ವಿದ್ಯುತ್ ಉತ್ಪಾದನಾ ಯಂತ್ರಗಳನ್ನು ಅಳವಡಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆಯೇ;

(ಈ) ನೀಡುತ್ತಿದ್ದಲ್ಲಿ, ಎಷ್ಟು ಸಹಾಯಧನವನ್ನು ಯಾವ ಯಾವ ವರ್ಗಕ್ಕೆ ನೀಡಲಾಗುತ್ತಿದೆ;

(ಉ) ಈ ಸೌರ ಮತ್ತು ಪವನ ವಿದ್ಯುತ್ ಉತ್ಪಾದನಾ ಯಂತ್ರಗಳಿಂದ ಉತ್ಪಾದಿಸುವ ವಿದ್ಯುತ್‌ನ್ನು ಸರ್ಕಾರ ಯಾವ ಯಾವ ದರದಲ್ಲಿ ಖರೀದಿ ಮಾಡುತ್ತಿದೆ? (ವಿವರಗಳೊಂದಿಗೆ ಮಾಹಿತಿ ನೀಡುವುದು)

## ವಿಧಾನಸೌಧದ ಸುತ್ತಮುತ್ತ ಇರುವ ಕ್ಲಬ್‌ಗಳ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):–**

೧೬೫ (೨೭೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಧಾನಸೌಧದಿಂದ ೩.೦ ಕಿಮೀ. ಅಂತರದಲ್ಲಿ ಇರುವ ಕ್ಲಬ್‌ಗಳು ಯಾವುವು;

(ಆ) ಆ ಕ್ಲಬ್ ಗಳಿಗೆ ಸರ್ಕಾರ ನೀಡಿರುವ ಮತ್ತು ನೀಡುತ್ತಿರುವ ಸೌಲಭ್ಯಗಳಾವುವು; (ಕ್ಲಬ್ ವಾರು ಮಾಹಿತಿ ನೀಡುವುದು)

(ಇ) ಸದರಿ ಕ್ಲಬ್‌ಗಳಲ್ಲಿ ಎಷ್ಟು ಜನ ಸದಸ್ಯರಿದ್ದಾರೆ; ಆ ಪೈಕಿ ಖಾಯಂ ಸದಸ್ಯರ ಮತ್ತು ತಾತ್ಕಾಲಿಕ ಸದಸ್ಯರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಗಾಲ್ಫ್ ಕ್ಲಬ್, ಸೆಂಚುರಿ ಕ್ಲಬ್, ಟರ್ಫ್ ಕ್ಲಬ್, ಬೌರಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಕ್ಲಬ್ ಟೆನ್ನಿಸ್ ಕ್ಲಬ್ ಮತ್ತು

ಸಚಿವಾಲಯ ಕ್ಲಬ್‌ನ ಖಾಯಂ/ತಾತ್ಕಾಲಿಕ ಸದಸ್ಯರ ಸಂಖ್ಯೆ ಎಷ್ಟು; ಅವರುಗಳ ಹೆಸರು ಮತ್ತು ವಿಳಾಸ ಸಮೇತ ಮಾಹಿತಿ ನೀಡುವುದು;

(ಈ) ಆ ಸದಸ್ಯರುಗಳ ಪೈಕಿ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಸದಸ್ಯತ್ವ ಹೊಂದಿದ್ದಾರೆಯೇ; ಹೊಂದಿದ್ದಲ್ಲಿ ಅವರ ಹೆಸರು ಹುದ್ದೆಯ ಮಾಹಿತಿ ನೀಡುವುದು?

## ಹೆಚ್ಚು ವಿದ್ಯುತ್ ಬಳಕೆಗೆ ದಂಡ ವಿಧಿಸುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೬ (೨೮೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನುಮತಿ ಪಡೆದ ಲೋಡ್‌ಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡಿದರೆ ದಂಡವನ್ನು ವಿಧಿಸುವ ಯೋಚನೆ ಸರ್ಕಾರಕ್ಕೆ ಇದೆಯೇ;

(ಆ) ದಂಡ ವಿಧಿಸುವುದರಿಂದ, ಸಾರ್ವಜನಿಕರಿಗೆ ತೊಂದರೆ ಆಗುವುದಿಲ್ಲವೇ;

(ಇ) ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಾರ್ವಜನಿಕರು ಸಂಕಷ್ಟವನ್ನು ಅನುಭವಿಸುತ್ತಿದ್ದು, ಈ ದಂಡವನ್ನು ವಿಧಿಸುವುದರಿಂದ ಮತ್ತಷ್ಟು ಸಂಕಷ್ಟಕ್ಕೆ ಈಡಾಗುವುದಿಲ್ಲವೇ;

(ಈ) ಹಾಗಿದ್ದಲ್ಲಿ, ದಂಡ ವಿಧಿಸುವ ಆಲೋಚನೆಯನ್ನು ಸರ್ಕಾರ ಹಿಂದಕ್ಕೆ ಪಡೆಯಲಾಗುವುದೇ?

## ಎ.ಪಿ.ಎಂ.ಸಿ ಮಾರುಕಟ್ಟೆಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೭ (೨೪೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿರುವ ಎ.ಪಿ.ಎಂ.ಸಿ ಮಾರುಕಟ್ಟೆಗಳ ಸಂಖ್ಯೆ ಎಷ್ಟು;

(ಆ) ಸದರಿ ಮಾರುಕಟ್ಟೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಶೆಲ್ಟರ್ ಮತ್ತು ಮೂಲಭೂತ ಸೌಲಭ್ಯಗಳ ಕೊರತೆಯಿಂದ ರೈತರುಗಳು ಆ ಮಾರುಕಟ್ಟೆಗಳನ್ನು ಸರಿಯಾಗಿ ಬಳಸಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; ಸದರಿ ಮಾರುಕಟ್ಟೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಸ್ತುತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು?

## ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೬೮ (೨೪೨) ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿವಾರು ಮಾಹಿತಿ ನೀಡುವುದು)

(ಆ) ಸದರಿ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಾವುವು; ಇವುಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳಾವುವು; ಪೂರ್ಣಗೊಳ್ಳದೆ ಇರುವ ಕಾಮಗಾರಿಗಳಾವುವು; (ಸಂಪೂರ್ಣ ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲೆಯ ಹೆಚ್ಚಿನ ಅಭಿವೃದ್ಧಿಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು)

## ರೈತರ ಬೆಳೆ ಹಾನಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೯ (೨೪೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅತಿವೃಷ್ಠಿಯಿಂದ ಬೆಳೆಹಾನಿಯಾಗಿ ಕೃಷಿ ಉತ್ಪಾದನೆ ಅಂದಾಜಿಗಿಂತ ಕಡಿಮೆಯಾಗಿರುವ ಜಿಲ್ಲೆಗಳಾವುವು;

(ಆ) ಈಗಿನ ಅಂದಾಜಿನ ಪ್ರಕಾರ ಈ ವರ್ಷದ ಕೃಷಿ ಉತ್ಪಾದನೆಯಲ್ಲಿ ಕಡಿಮೆ ಆಗಬಹುದಾದ ಉತ್ಪಾದನೆ ಎಷ್ಟು;

(ಇ) ಅತಿವೃಷ್ಠಿಯಿಂದ ರೈತರ ಆಸ್ತಿ–ಪಾಸ್ತಿ ಮತ್ತು ಬೆಳೆಗಳಿಗೆ ಆಗಿರುವ ಹಾನಿಯ ಅಂದಾಜು ಎಷ್ಟು;

(ಈ) ರೈತರ ಬೆಳೆಗಳಿಗೆ ಆಗಿರುವ ನಷ್ಟವನ್ನು ತುಂಬಿಕೊಡಲು ಸರ್ಕಾರ ಕಾರ್ಯೋನ್ಮುಖವಾಗಿದೆಯೇ? (ವಿವರ ನೀಡುವುದು)

## ಕೃಷಿ ಆಯೋಗದ ಬಗ್ಗೆ.

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೦ (೨೪೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೃಷಿ ಆಯೋಗ ಚಾಲ್ತಿಯಲ್ಲಿದೆಯೇ ; ಹಾಗಿದ್ದಲ್ಲಿ, ಪ್ರಸ್ತುತ ಕೃಷಿ ಆಯೋಗದ ಸದಸ್ಯರು ಯಾರು ; ಈ ಆಯೋಗ ನಡೆಸಿರುವ ಸಭೆಗಳೆಷ್ಟು ; ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳಾವುವು ;

(ಆ) ಕೃಷಿ ಆಯೋಗವು ಸರ್ಕಾರಕ್ಕೆ ನೀಡಿರುವ ಸಲಹೆಗಳು ಯಾವುವು ; ಇದರಿಂದ ರೈತರಿಗೆ ಆಗಿರುವ ಉಪಯೋಗಗಳು ಯಾವುವು ; (ಮಾಹಿತಿ ನೀಡುವುದು)

## ಸಹಕಾರ ಸಂಘಗಳಿಂದ ರೈತರಿಗೆ ಸಾಲ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೧ (೨೬೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿರುವ ವ್ಯವಸಾಯ ಸಹಕಾರ ಸಂಘಗಳೆಷ್ಟು ; ಇವುಗಳಿಗೆ ಸಾಲಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಪ್ರತಿ ಸಹಕಾರ ಸಂಘಗಳಿಂದ ರೈತರಿಗೆ ನೀಡುತ್ತಿರುವ ಸಾಲದ ಮೊತ್ತ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸಾಲಕ್ಕಾಗಿ ಬಂದ ಅರ್ಜಿಗಳಲ್ಲಿ ಸಾಲ ಸಿಗದೆ ಇರುವ ರೈತರ ಸಂಖ್ಯೆ ಎಷ್ಟು ; ಹಾಗೂ ಸಾಲ ಸಿಗದಿರುವುದಕ್ಕೆ ಕಾರಣಗಳೇನು ?

## ತೊಗರಿ ಅಭಿವೃದ್ಧಿ ಪುನಶ್ಚೇತನದ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೨ (೨೬೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತೊಗರಿ ಅಭಿವೃದ್ಧಿ ಮಂಡಳಿ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಕಳೆದ ೩ ವರ್ಷಗಳಲ್ಲಿ ತೊಗರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ;

(ಇ) ತೊಗರಿ ಅಭಿವೃದ್ಧಿ ಮಂಡಳಿಯಿಂದ ಇದುವರೆಗೆ ರೈತರಿಂದ ಎಷ್ಟು ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿದೆ ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೩ (೨೫೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಪ್ರಮಾಣ ಎಷ್ಟು ;

(ಆ) ಈ ಜಿಲ್ಲೆಯಲ್ಲಿ ಪ್ರತಿ ದಿನಕ್ಕೆ ಎಷ್ಟು ಘಂಟೆಗಳ ಕಾಲ ೨ ಫೇಸ್ ಹಾಗೂ ೩ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತದೆ ; (ಸ್ಟೇಷನ್‌ವಾರು ವಿವರ ನೀಡುವುದು)

(ಇ) ಈ ಭಾಗದಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜಿಗೆ ಕಾರಣಗಳೇನು ?

(ಈ) ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೀದರ್ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೪ (೨೬೨) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಜಾಗದ ವಿಸ್ತೀರ್ಣವನ್ನು ಗುರುತಿಸಲಾಗಿದೆಯೇ ;

(ಆ) ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಎಷ್ಟು ಮಳಿಗೆಯನ್ನು ನಿರ್ಮಿಸಲಾಗಿದೆ ; ಈ ಮಳಿಗೆಗಳಿಂದ ಎಷ್ಟು ಬಾಡಿಗೆ ಬರುತ್ತದೆ ;

(ಇ) ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರಸ್ತೆ, ಚರಂಡಿ ಇನ್ನಿತರ ಮೂಲಭೂತ ಸೌಲಭ್ಯಗಳಿಲ್ಲದೆ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕುರಿಗಳಿಗೆ ಸಿಡುಬು ರೋಗ

**ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೫ (೧೧೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರ ಜಿಲ್ಲೆ ಹನೂರು ಸಮೀಪದ ಕೆಲವು ಗ್ರಾಮಗಳಲ್ಲಿ ಕುರಿಗಳಿಗೆ ಸಿಡುಬು ರೋಗ ಬಂದು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮೃತಪಟ್ಟ ಕುರಿಗಳ ಸಂಖ್ಯೆ ಎಷ್ಟು ; ಈ ಬಗ್ಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ ;

(ಇ) ಮಾರಕವಾದ ಈ ರೋಗವನ್ನು ತಡೆಗಟ್ಟಲು ಈ ಭಾಗದಲ್ಲಿ ಎಷ್ಟು ಕುರಿಗಳಿಗೆ ರೋಗ ನಿರೋಧಕ ಲಸಿಕೆಯ ಚುಚ್ಚು ಮದ್ದನ್ನು ನೀಡಲಾಗಿದೆ ? (ವಿವರ ಒದಗಿಸುವುದು)

## ಹನೂರು ಬಳಿ ಇರುವ ಕಣ್ಣೂರಿನ ರೇಷ್ಮೆ ನೂಲು ಬಿಚ್ಚಣಿಕೆ ಘಟಕಗಳು

**ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೬ (೧೨೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರ ಜಿಲ್ಲೆ ಹನೂರು ಬಳಿ ಇರುವ ಕಣ್ಣೂರಿನಲ್ಲಿ ಎಷ್ಟು ನೂಲು ಬಿಚ್ಚಣಿಕೆ (ರೀಲಿಂಗ್) ಘಟಕಗಳಿವೆ ; ಇವು ಎಷ್ಟು ಜನ ಸ್ಥಳೀಯರಿಗೆ ಉದ್ಯೋಗ ಒದಗಿಸಿವೆ ;

(ಆ) ಈ ರೇಷ್ಮೆ ನೂಲು ಉತ್ಪಾದನಾ ಘಟಕಗಳಿಗೆ ಸೂಕ್ತ ಸಮಯಕ್ಕೆ ಸರಿಯಾಗಿ ಗುಣಮಟ್ಟದ ರೇಷ್ಮೆ ಗೂಡುಗಳನ್ನು ಸಬ್ಸಿಡಿ ದರದಲ್ಲಿ ಒದಗಿಸುವುದರ ಮೂಲಕ ಇದನ್ನು ಅವಲಂಬಿಸಿರುವ ಈ ಊರಿನ ಕೂಲಿ ರೈತ ಕಾರ್ಮಿಕರಿಗೆ ಖಾಯಂ ಆಗಿ ಉದ್ಯೋಗವಕಾಶ ದೊರೆಯುವಂತೆ ಮಾಡಲು ಕ್ರಮ ಜರುಗಿಸಲಾಗುವುದೇ ?

## ಕಲಬುರಗಿ ಕಂದಾಯ ವಿಭಾಗದ ಆರು ಜಿಲ್ಲೆಗಳಲ್ಲಿ ಖರ್ಚಾಗಿರುವ ಅನುದಾನದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೭ (೧೪೯) ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಕಂದಾಯ ವಿಭಾಗದ ಆರು ಜಿಲ್ಲೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; ಇದುವರೆಗೂ ಖರ್ಚಾಗಿರುವ ಅನುದಾನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಯಾವ ಯಾವ ಜಿಲ್ಲಾ ಹೆದ್ದಾರಿಗಳನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತಿಸಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದ ಸರಾಸರಿಗೆ ತರುವುದಕ್ಕಾಗಿ ಈ ಕಂದಾಯ ವಿಭಾಗದಲ್ಲಿ ಇನ್ನೂ ಎಷ್ಟು ಕಿ.ಮೀ. ಜಿಲ್ಲಾ, ರಾಜ್ಯ ಹೆದ್ದಾರಿ ನಿರ್ಮಾಣ ಮಾಡಬೇಕಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಬೆಳೆ ವಿಮೆ ಪರಿಹಾರದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೮ (೧೫೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨೦೧೫–೧೬ನೇ ಸಾಲಿನಲ್ಲಿ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಬೆಳೆ ವಿಮೆ ಪರಿಹಾರ ಮಂಜೂರಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇದುವರೆಗೂ ಎಷ್ಟು ರೈತರಿಗೆ ಬೆಳೆ ಪರಿಹಾರ ವಿಮೆ ಪಾವತಿ ಮಾಡಲಾಗಿದೆ ;

(ಇ) ಇನ್ನೂ ಎಷ್ಟು ರೈತರಿಗೆ ಬೆಳೆ ವಿಮೆ ಪಾವತಿ ಮಾಡಬೇಕು ; ವಿಳಂಬವಾಗಲು ಕಾರಣವೇನು ? (ಸಮಗ್ರ ಮಾಹಿತಿ ನೀಡುವುದು)

## ಕಲಬುರಗಿ ಜಿಲ್ಲೆಯ ಲಘು ನೀರಾವರಿ ಯೋಜನೆ ಬಗ್ಗೆ.

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು):–**

೧೭೯ (೨೩೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ಲಘು ನೀರಾವರಿ ಯೋಜನೆಗೆ ಎಷ್ಟು ಅರ್ಜಿಗಳು ಬಂದಿವೆ ; (ವಿವರ ನೀಡುವುದು)

(ಆ) ರೈತರ ಎಷ್ಟು ಎಕರೆ ಜಮೀನನ್ನು ಹನಿ ನೀರಾವರಿಗೆ ಒಳಪಡಿಸಲಾಗಿದೆ ; ಇದಕ್ಕಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಇ) ಈ ಯೋಜನೆಗಾಗಿ ಅಗತ್ಯವಿರುವ ಅನುದಾನವೆಷ್ಟು ; ಮತ್ತು ಬಿಡುಗಡೆ ಮಾಡಲು ಬಾಕಿ ಇರುವ ಅನುದಾನವೆಷ್ಟು ; ಬಿಡುಗಡೆ ಮಾಡದಿದ್ದಲ್ಲಿ, ವಿಳಂಬಕ್ಕೆ ಸೂಕ್ತ ಕಾರಣ ನೀಡುವುದು?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0192/700 ಪ್ರತಿಗಳು/14–11–2016